ಸಂಪುಟ 01 । ಸಂಚಿಕೆ 38 । ಶುಕ್ರವಾರ 19 ಡಿಸೆಂಬರ್ 2025 । ಪುಟ 4 । ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಅಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1) ಗೋವಾ ವಿಮೋಚನಾ ದಿನ (Goa Liberation Day) ಈ ದಿನವು 1961 ರ ಡಿಸೆಂಬರ್ 19 ರಂದು ಪೋರ್ಚುಗೀಸ್ ಆಡಳಿತದಿಂದ ಗೋವಾ, ದಮನ್ ಮತ್ತು ದೀವುಗಳನ್ನು ಭಾರತೀಯ ಸೇನೆ ಮುಕ್ತಗೊಳಿಸಿದ ದಿನವನ್ನು ಆಚರಿಸುತ್ತದೆ. ಸುಮಾರು 450 ವರ್ಷಗಳನ್ನೊಳಗೊಂಡ ವಸಾಹತಿಯ ಆಡಳಿತಕ್ಕೆ ಅಂತ್ಯವಾಗಿದ್ದು, ಗೋವಾ ಭಾರತಕ್ಕೆ ಸೇರಿಕೊಂಡ ಉಲ್ಲೇಖನೀಯ ದಿನವಾಗಿದೆ.ಈ ಸಂದರ್ಭದಲ್ಲಿ ಗೋವಾನಲ್ಲಿ ಧ್ವಜಾರೋಹಣ, ಶ್ರದ್ಧಾಂಜಲಿ ಹಾರಿಸುವ ಕಾರ್ಯಕ್ರಮಗಳು, ಸಾಂಸ್ಕೃತಿಕ ಮೆರವಣಿಗೆ ಮತ್ತು ಶಾಲಾ/ಸಂಸ್ಥೆಯ ಕಾರ್ಯಕ್ರಮಗಳು ನಡೆಯುತ್ತವೆ.

## ಸುಭಾಷಿತ

"ನಾನು ಈಗಾಗಲೇ ಪರಿಪೂರ್ಣನಾಗಿದ್ದೇನೆ, ಆದ್ದರಿಂದ ನನಗೆ ಅಭ್ಯಾಸದ ಅಗತ್ಯವಿಲ್ಲ ಎಂದು ನೀವು ಹೇಳಬಹುದು. ಆದರೆ ವಾಸ್ತವದಲ್ಲಿ, ನಿರಂತರ ಅಭ್ಯಾಸದ ಕಾರಣದಿಂದಲೇ ಮನುಷ್ಯನು ಪರಿಪೂರ್ಣನಾಗುತ್ತಾನೆ."

ವಿನಿತಾ ಬಾಲಿ

## ಶ್ರೀಮತಿ ನೀಲಮ್ಮ ಶಿಕ್ಷಕಿ ರವರ ಮಗನ ಹುಟ್ಟು ಹಬ್ಬದ ನಿಮಿತ್ಯ ಶಾಲೆಯ ಎಲ್ಲಾ ವಿದ್ಯಾರ್ಥಿಗಳಿಗೆ ಕ್ಲಿಪ್ ಬೋರ್ಡ್ ವಿತರಣೆ

❏ ನೈಜ್ಯ ದೆಸೆ ನ್ಯೂಸ್

ಬಳಗಾನೂರ:ಶ್ರೀಮತಿ ನೀಲಮ್ಮ ಶಿಕ್ಷಕಿ ಅವರ ಮಗನ ಹುಟ್ಟು ಹಬ್ಬದ ನಿಮಿತ್ಯ ಶಾಲೆಯ ಎಲ್ಲಾ ವಿದ್ಯಾರ್ಥಿಗಳಿಗೆ ಕ್ಲಿಪ್ ಬೋರ್ಡ್ ಅನ್ನು ವಿತರಿಸಿದರು.



ಬಳಗಾನೂರು ಸಮೀಪವಿರುವ ಉನ್ನತಿಕರಿಸಿದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಬೆಳ್ಳಿಗನೂರು ಶಾಲೆಯ ಸಹ ಶಿಕ್ಷಕಿ ಆಗಿರುವಂತಹ ಶ್ರೀಮತಿ ನೀಲಮ್ಮ ಅವರ ಮಗನ ಹುಟ್ಟು ಹಬ್ಬದ ನಿಮಿತ್ಯ ಶಾಲೆಯ ಎಲ್ಲಾ ವಿದ್ಯಾರ್ಥಿಗಳಿಗೆ ಕ್ಲಿಪ್ ಬೋರ್ಡ್ ಅನ್ನು ವಿತರಿಸಿದರು. ಅವರಿಗೆ ಶಾಲೆಯ ಎಲ್ಲಾ ಶಿಕ್ಷಕರಪರವಾಗಿ ಹಾಗೂ ಎಲ್ಲಾ ವಿದ್ಯಾರ್ಥಿಗಳ ಪರವಾಗಿ ತುಂಬು ಹೃದಯದ ಧನ್ಯವಾದಗಳನ್ನು ತಿಳಿಸಿರುತ್ತಾರೆ.

## ನಾವದಗಿ ಶ್ರೀಗಳಿಗೆ ಗೌರವ ಸಮರ್ಪಣೆ

❏ ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ತಾಲೂಕಿನ ಕಲಕೇರಿ ಗ್ರಾಮದ ಪರಮ ಪೂಜ್ಯಶ್ರೀ ಷ.ಬ್ರ. ಜಯಶಾಂತಲಿಂಗೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳ 70ನೇ ಹುಟ್ಟುಹಬ್ಬದ ವರ್ಧಂತಿ ಮಹೋತ್ಸವ ಅಂಗವಾಗಿ



ಹಮ್ಮಿಕೊಂಡ ಧರ್ಮ ಸಭೆಯಲ್ಲಿ ಕೇದಾರ ಜಗದ್ಗುರುಗಳಾದ ಶ್ರೀ ಶ್ರೀ ಶ್ರೀ 1008 ಭೀಮಾಶಂಕರಲಿಂಗ. ಶಿವಾಚಾರ್ಯ ಭಗವತ್ಪಾದಂಗಳವರ ಸಾನಿಧ್ಯದಲ್ಲಿ ನಾವದಗಿ ಬ್ರಹನ್ಮಠದ ಷ.ಬ್ರ. ಶ್ರೀ ರಾಜ ಗುರು ರಾಜೇಂದ್ರ ಒಡೆಯರ್ ಶಿವಾಚಾರ್ಯರಿಗೆ ಕಾರ್ಯಕ್ರಮ ಸಮಿತಿಯ ವತಿಯಿಂದ ಗೌರವ ಸಮರ್ಪಣೆ ಸಲ್ಲಿಸಲಾಯಿತು. ಈ ಸಮಯದಲ್ಲಿ ಹಲವಾರು ಪರಮ ಪೂಜ್ಯರು ರಾಜಕೀಯ ಮುಖಂಡರು ಗಣ್ಯರು ಗ್ರಾಮದ ಹಿರಿಯರು ಉಪಸ್ಥಿತರಿದ್ದರು.

# ರಾಜ್ಯದಲ್ಲಿ 100 ವಿದ್ಯುತ್ ಕೇಂದ್ರಗಳ ಸ್ಥಾಪನೆ ಸಚಿವ ಕೆ.ಜೆ.ಜಾರ್ಜ್

ಬೆಳಗಾವಿ: ಪ್ರಸಕ್ತ ವರ್ಷ ರಾಜ್ಯದಲ್ಲಿ 100 ವಿದ್ಯುತ್ ಕೇಂದ್ರಗಳನ್ನು ಸ್ಥಾಪಿಸಲಾಗುವುದು ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ವಿಧಾನಸಭೆಗೆ ತಿಳಿಸಿದರು.ಪ್ರಶ್ನೋತ್ತರ ವೇಳೆಯಲ್ಲಿ ದೊಡ್ಡನಗೌಡ ಹನುಮಗೌಡ ಪಾಟೀಲ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, 2-3 ವರ್ಷದಲ್ಲಿ 400 ವಿದ್ಯುತ್ ಉಪಠಾಣೆಗಳನ್ನು ಮಾಡುವ ಗುರಿಯಿದ್ದು,ಜಮೀನು ಇರುವ ಕಡೆಗಳಲ್ಲಿ ಉಪಠಾಣೆಗಳನ್ನು ಮಂಜೂರು ಮಾಡಲಾಗುತ್ತಿದೆ ಎಂದರು.

ಪವನಶಕ್ತಿ ವಿದ್ಯುತ್ ಯಂತ್ರಗಳನ್ನು ಅಳವಡಿಸಲು ಭಾರೀ ಗಾತ್ರದ ಯಂತ್ರೋಪಕರಣಗಳನ್ನು ಪಂಚಾಯಿತಿ ರಸ್ತೆಗಳಲ್ಲಿ ಸಾಗಿಸಿದಾಗ ರಸ್ತೆಗಳು ಹಾಳಾಗುತ್ತವೆ. ಅಂತಹ ರಸ್ತೆಗಳನ್ನು ಪವನಶಕ್ತಿ ಯಂತ್ರಗಳನ್ನು ಅಳವಡಿಸುವವರೇ ಸರಿಪಡಿಸಬೇಕು. ಈ ಸಂಬಂಧ ಶೀಘ್ರದಲ್ಲೇ ಆದೇಶ ಹೊರಡಿಸಲಾಗುವುದು. ಕ್ರೆಡಿಲ್ ವ್ಯವಸ್ಥಾಪಕ ನಿರ್ದೇಶಕರಿಗೆ ಸೂಚನೆ ನೀಡಲಾಗುವುದು ಎಂದು ಅವರು ಹೇಳಿದರು. ರಾಜ್ಯದಲ್ಲಿ ನಿತ್ಯ ಕೃಷಿ ಪಂಪ್‌ಸೆಟ್‌ಗಳಿಗೆ 7



ಗಂಟೆ ಥ್ರೀಫೇಸ್ ವಿದ್ಯುತ್ ಒದಗಿಸಲಾಗುತ್ತಿದೆ.

ಗೃಹಬಳಕೆ ಹಾಗೂ ವಾಣಿಜ್ಯ ಬಳಕೆಗೆ ದಿನದ 24 ಗಂಟೆಯೂ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ ಎಂದ ಅವರು, ಬಿಸಿಲು ಇದ್ದಾಗ ಮಾತ್ರ ಸೌರ ವಿದ್ಯುತ್ ಉತ್ಪಾದನೆಯಾಗುತ್ತದೆ. ಆದರೆ ಪವನಶಕ್ತಿ ಗಾಳಿ ಬೀಸುತ್ತಿದ್ದರೆ ಹಗಲು-ರಾತ್ರಿ ಉತ್ಪಾದನೆಯಾಗುತ್ತದೆ. ರಾಜ್ಯದಲ್ಲಿ 7,300 ಮೆಗಾವ್ಯಾಟ್‌ನಷ್ಟು ಪವನಶಕ್ತಿ ವಿದ್ಯುತ್ ಉತ್ಪಾದನೆಯಾಗುತ್ತಿದೆ ಎಂದು ಅವರು ತಿಳಿಸಿದರು. ಕುಷ್ಟಗಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 213 ವಿಂಡ್ ಟರ್ಬೈನ್‌ಗಳಿಂದ 433.12 ಮೆಗಾವ್ಯಾಟ್ ಸಾಮರ್ಥ್ಯದ ಪವನವಿದ್ಯುತ್ ಯೋಜನೆಗಳು ಅನುಷ್ಠಾನಗೊಂಡಿವೆ. ನವೆಂಬರ್ ಅಂತ್ಯದ ವೇಳೆಗೆ 1,394 ಮೆಗಾವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಗಳು ಹಂಚಿಕೆಯಾಗಿದ್ದು, 57 ಅನುಷ್ಠಾನಗೊಂಡಿವೆ.

1,337 ಮೆಗಾ ವ್ಯಾಟ್ ಸಾಮರ್ಥ್ಯದ ಯೋಜನೆಗಳು ವಿವಿಧ ಹಂತದ ಪ್ರಗತಿಯಲ್ಲಿವೆ ಎಂದು ಹೇಳಿದರು. ಪವನ ವಿದ್ಯುತ್ ಯೋಜನೆಗಳಿಗೆ ಬೇಕಾಗಿರುವ ಜಮೀನುಗಳನ್ನು ಪಡೆಯುವ ಸಂಪೂರ್ಣ ಜವಾಬ್ದಾರಿ ಆಯಾ ಕಂಪನಿಯವರದಾಗಿರುತ್ತದೆ. ರೈತರು ಮತ್ತು ಗುತ್ತಿಗೆದಾರರ ನಡುವಿನ ಒಪ್ಪಂದದ ಆಧಾರದ ಮೇಲೆ ಪವನಶಕ್ತಿ ಯಂತ್ರಗಳನ್ನು ಅಳವಡಿಸಬೇಕಾಗುತ್ತದೆ ಎಂದು ಅವರು ಹೇಳಿದರು. ಹಾಸನ ಜಿಲ್ಲಾ ಅರಕಲಗೂಡು ವಿಧಾನಸಭಾ ಕ್ಷೇತ್ರದ ಆಲ್ಲಪಟ್ಟಣ ಗ್ರಾಮದಲ್ಲಿ 220 ಕೆವಿ ವಿದ್ಯುತ್ ಉಪಕೇಂದ್ರವನ್ನು ಆದಷ್ಟು ಶೀಘ್ರ ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಜೆಡಿಎಸ್ ಶಾಸಕ ಎ.ಮಂಜು ಅವರ ಪ್ರಶ್ನೆಗೆ ಉತ್ತರಿಸಿದರು.

# ಉಮಳಿ ಹೊಸೂರು ಕ್ರಿಸ್ತನ ಸಭೆ ವತಿಯಿಂದ ಉಚಿತ ಕಣ್ಣಿನ ತಪಾಸಣೆ ಶಿಬಿರ



❏ ನೈಜ್ಯ ದೆಸೆ ನ್ಯೂಸ್

**ಮಾನವಿ: ಡಿ 18 ರಂದು ಉಮಳಿ ಹೊಸುರು ಕ್ರಿಸ್ತನ ಸಭೆ ವತಿಯಿಂದ ಉಚಿತ ಕಣ್ಣಿನ ತಪಾಸಣೆ ಶಿಬಿರವನ್ನು ಯಶಸ್ವಿಯಾಗಿ ನಡೆಯಿತು ಈ ಕಾರ್ಯಕ್ರಮದಲ್ಲಿ ಸುಮಾರು 300 ಜನಕ್ಕೆಕಣ್ಣಿನ ತಪಾಸಣೆ ಮಾಡಲಾಯಿತು.**

ಈ ಗ್ರಾಮದಲ್ಲಿ ಕ್ರಿಸ್ತನ ಸಭೆ ತುಂಬಾ ಸಮಾಜಿಕವಾದಂತಹ ಕಾರ್ಯಕ್ರಮಗಳನ್ನು ಮಾಡುತ್ತ ಬರುತ್ತಿದೆ ಕೊವಿಡ ಸಮಯದಲ್ಲಿ ಆಹಾರ ಕಿಟ್ಟುಗಳನ್ನು ವಿತರಿಸಿದೆ ಮತ್ತು ಬೇಸಿಗೆಯಲ್ಲಿ ನೀರಿನ ಅರವಟ್ಟಿಗೆಗಳನ್ನು ಮಾಡಿ ದಾಹವನ್ನು ತೀರಿಸುವ ನಿಟ್ಟಿನಲ್ಲಿ ತೆಂಗಿನಕಾಯಿ ಎಳೆನೀರು ವಿತರಣೆ ಕಾರ್ಯಕ್ರಮ ಮಕ್ಕಳಿಗೆ ಪೆನ್ನು ಮತ್ತು ಪುಸ್ತಕಗಳ ವಿತರಣೆ ವೃದ್ಧರಿಗೆ ಬೆಡ್ ಶೀಟ್ ಗಳು ವಿತರಣೆ ಹೀಗೆ ಅನೇಕವಾದ ಸಾಮಾಜಿಕ ಸೇವೆ ಅತ್ಯುತ್ತಮವಾಗಿ ಮಾಡುತ್ತಾ ಬಂದಿದೆ ಈ ದಿನದಲ್ಲಿ ಸುಮಾರು ಮೂರು ನೂರು ಜನಕ್ಕೆ ಕಣ್ಣಿನ ತಪಾಸಣೆ ಮಾಡಲಾಯಿತು. ಇದರಲ್ಲಿ 36 ಜನಕ್ಕೆ ಕಣ್ಣಿನ ಪೊರೆ ಬಂದಿದ್ದು ಈ ಕಣ್ಣಿನ ಪೊರೆ ಶಸ್ತ್ರ ಚಿಕಿತ್ಸೆಯನ್ನು ಉಚಿತವಾಗಿ ಮಾಡಲು ಡಾಕ್ಟರ್ ಶಂಕರ ದೃಷ್ಟಿ ಆಸ್ಪತ್ರೆ, ಸಿಂಧನೂರು ಮತ್ತು ಶಿವಮೊಗ್ಗ ಇವರು ತಿಳಿಸಿದ್ದಾರೆ ಇಂಥ ಕಾರ್ಯಕ್ರಮಗಳನ್ನು ಮಾಡುವುದರಿಂದ ಶ್ಲಾಘನೀಯ ವೈದ್ಯರು ಮತ್ತು ಜನರು ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದರೆ ಎಲ್ಲಾ ಜವಾಬ್ದಾರಿಯನ್ನು ಕ್ರಿಸ್ತನ ಸಭೆ ಹೊತ್ತುಕೊಂಡು ಮಾಡುತ್ತದೆ ಎಂದು ಸುವಾರ್ತಿಕರಾದ ದೇವರಾಜ್ ಅವರು ತಿಳಿಸಿದ್ದಾರೆ.

ಇಂತಹ ಇನ್ನೂ ಅನೇಕ ಸಮಾಜವಾದಂತಹ ಒಳ್ಳೆಯ ಕಾರ್ಯಕ್ರಮಗಳನ್ನು ಮಾಡುವಂತೆ ದೇವರು ಶಕ್ತಿಯನ್ನು ಅನುಗ್ರಹಿಸಲಿ ಮನುಷ್ಯರ ಪ್ರೋತ್ಸಾಹ ದಯೆಯು ಕೂಡ ಇರಲಿ ಜನಪರ ಬಡವರ ಇನ್ನು ಒಳ್ಳೆಯ ಕಾರ್ಯಕ್ರಮಗಳನ್ನು ಮಾಡುತ್ತ ಮುಂದುವರಿಲಿ ಎಂದು ಜನರು ಹರಸಿ ಕೊಂಡಾಡಿದರು ಈ ಕಣ್ಣಿನ ತಪಾಸಣೆ ಶಿಬಿರವನ್ನು ಏರ್ಪಡಿಸಿ ತುಂಬಾ ಒಳ್ಳೆಯ ಕೆಲಸ ಮಾಡಿದೆ ಎಂದು ಬಂದಂತ ಜನರು ಇದ-ರಿಂದ ನನಗೆ ತುಂಬಾ ಉಪಯೋಗವಾಗಿದೆ ಕಣ್ಣಿನ ಪೊರೆಯ ಶಸ್ತ್ರ ಚಿಕಿತ್ಸೆ ಉಚಿತವಾಗಿ ನಮಗೆ ದೊರಕಿದೆ ಎಂದು ಬಹಳ ಸಂತೋಷಪಟ್ಟರು ಈ ಕಾರ್ಯಕ್ರಮದಲ್ಲಿ ಕ್ರಿಸ್ತನ ಸಭೆಯ ಸುವಾರ್ತಿಕರಾದ ದೇವರಾಜ್ ಮತ್ತು ರೈತ ಸಂಘದ ರಾಜಸಾಬ್ ಚಂದ್ರಶೇಖರಯ್ಯ ಸ್ವಾಮಿ ಕುಮಾರ ಆನಂದಮ್ಮ ಮಹಾದೇವಮ್ಮ ಇನ್ನಿತರರು ಭಾಗಿಯಾಗಿದ್ದರು.

# ಡಿಸೆಂಬರ್ 20ರಂದು ವಿದ್ಯುತ್ ವ್ಯತ್ಯಯ

❏ ನೈಜ್ಯ ದೆಸೆ ನ್ಯೂಸ್

**ರಾಯಚೂರು ಡಿಸೆಂಬರ್ 18 (ಕರ್ನಾಟಕ ವಾರ್ತೆ): ಇಲ್ಲಿನ ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ಉಪ ವಿಭಾಗದ ನೋಡಲ್ ಆಫೀಸರ್ 220ಕೆವಿ ಸ್ವೀಕರಣ ಕೇಂದ್ರ ಕೆಪಿಟಿಸಿಎಲ್ ನಲ್ಲಿ ಮೂರನೇ ತ್ರೈಮಾಸಿಕ ನಿರ್ವಹಣಾ ಕಾಮಗಾರಿ ಕೈಗೊಳ್ಳುತ್ತಿರುವುದರಿಂದ ಡಿಸೆಂಬರ್ 20ರ ಬೆಳಿಗ್ಗೆ 10ರಿಂದ ಸಂಜೆ 6 ಗಂಟೆವರೆಗೂ ವಿದ್ಯುತ್ ವ್ಯತ್ಯಯ ಉಂಟಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಕೋರಲಾಗಿದೆ.**

ಸಿಇಓ ಆಫೀಸ್, ಶ್ರೀರಾಮ ನಗರ, ಉದಯ ನಗರ, ಆಜಾದ್ ನಗರ, ಸ್ಟೇಶನ್ ಏರಿಯಾ, ಇಂದಿರಾನಗರ, ಅಶೋಕ್ ಡಿಪೋ, ಗೋಲ್ ಮಾರ್ಕೆಟ್, ಚಾರಾ ಬಜಾರ್, ಮಚ್ಚಿ ಬಜಾರ್, ಕಮೇಲಾ, ಅರಬ್ ಮೊಲ್ಲಾ, ಆಟೋ ನಗರ, ಸಿಯಾತ ಲಾಬ್, ಗಂಜ್ ಸರ್ಕಲ್, ಗೋಶಾಲ ರೋಡ್, ಡಿಸ್ಟ್ರಿಕ್ಟ್ ಕೋರ್ಟ್, ಜಿಲ್ಲಾ ಪಂಚಾಯತ್ ಆಫೀಸ್, ಪಿಡ್ಲೂಡಿ, ಬಸವೇಶ್ವರ ಸರ್ಕಲ್, ಫಾರೆಸ್ಟ್ ಆಫೀಸ್, ಫೈರ್ ಸ್ಟೇಶನ್, ವೆರ?ನರಿ ಆಸ್ಪತ್ರೆ, ಕಾಂಗ್ರೆಸ್ ಆಫೀಸ್, ಮಂಚಲಾಪುರ ಕ್ರಾಸ್, ಹೊಸ ಶಿವಂ ಆಸ್ಪತ್ರೆ, ಕ್ಲಾರಿಟಿ ಆಸ್ಪತ್ರೆ, ಭಂಡಾರಿ ಆಸ್ಪತ್ರೆ, ಸುದ್ದಿಮೂಲ, ಹಿಂದಿ ವರ್ಧಮಾನ, ಬಿಎಸ್‌ಎನ್‌ಎಲ್ ಕಚೇರಿ, ಹೊಂಡಾ ಶೋರೂಮ್, ಅಹ್ಮದ್ ಫಂಕ್ಷನ್ ಹಾಲ್, ಸುಣ್ಣಭಟ್ಟಿ, ರೈಲ್ವೆ ಸ್ಟೇಷನ್, ಆಫೀಸರ್ಸ ಕಾಲೋನಿ, ಆಶಾಪುರ ರಸ್ತೆ, ಗುಡ್ ಶೆಡ್ ರಸ್ತೆ, ಐಡಿಎಸ್‌ಎಮ್‌ಟಿ ಲೇಔಟ್, ಪವನ್ ಲೇಔಟ್, ಗ್ಯಾನ್ ಮಂದಿರ, ಆಫಿಸರ್ಸ ಕಾಲೋನಿ, ಮೆಥಡಿಸ್ಟ್ ಚರ್ಚ್, ಜಂಡಕಟ್ಟ, ನವರಂಗ ದರ್ವಾಜ, ಟಿಪ್ಪು ಸುಲ್ತಾನ್‌ರೋಡ್, ಡಿ.ಸಿ. ಆಫೀಸ್ ಮುಂದುಗಡೆ, ಹಾಜಿ ಕಾಲೋನಿ, ಕೋಟ್‌ತಲಾರ್, ಹೊಸ ಸಿಎಮ್‌ಸಿ ಕಚೇರಿ, ಡ್ಯಾಡಿ ಕಾಲೋನಿ, ಆಶ್ರಫೀಯಾ ಕಾಲೋನಿ, ಕಾಕತೀಯ ಕಾಲೋನಿ, ಶಾಂತಿ ಕಾಲೋನಿ, ಡಾಲರ್ಸ್ ಕಾಲೋನಿ, ಪಿಸಿಬಿ ಕಾಲೋನಿ, ಪಾರ್ವತಿ ಕಾಲೋನಿ, ರಾಘವೇಂದ್ರ ಕಾಲೋನಿ, ಸಾರಾ ಟೀವರ್ಸ ಕಾಲೋನಿ, ಒಳ ಚರಂಡಿ ಸಂಸ್ಕರಣ ಘಟಕ ಮಂಚಲಾಪೂರ ರೋಡ್, ಬಸವೇಶ್ವರ ಕಾಲೋನಿ, ಬಂದೇನವಾಜ್ ಕಾಲೋನಿ, ಭಾರತಿ ನಗರ, ಚೆಕ್ಪೋಸ್ಟ್, ಎನ್‌ಜಿಓ ಕಾಲೋನಿ, ಗೌಸಿಯಾ ಕಾಲೋನಿ, ಎಸ್.ಟಿ ನಿಜಾಮುದ್ದೀನ್ ಕಾಲೋನಿ, ದೇವರಾಜ್ ಅರಸ್ ಕಾಲೋನಿ. ಗಾಂಧಿ ಲೇಔಟ್, ಅಶೋಕ್ ಕುಮಾರ್ ಲೇಔಟ್, ಲಿಂಗಸುಗೂರು ರಸ್ತೆ, ಕೃಷಿವಿಶ್ವವಿದ್ಯಾಲಯ ಎದುರುಗಡೆ, ಶಿವಂ ಆಸ್ಪತ್ರೆ, ಎಸ್,ಎನ್.ಟಿ. ಟಾಕೀಸ, ಲೋಹಾರವಾಡಿ, ಗಾಂಧಿ ಚೌಕ, ಬಂದರ್ ಗಲ್ಲಿ, ಎಂ.ಜಿ.ರಸ್ತೆ, ಹರಿಹರ ರಸ್ತೆ, ಮಕ್ತಲ ಪೇಟೆ. ಪಿಂಜರವಾಡಿ, ಶರಣಬಸವೇಶ್ವರ ಆಸ್ಪತ್ರೆ. ಬೆಟ್ಟದೂರ ಆಸ್ಪತ್ರೆ. ಪ್ಯಾರಸ್ ಗಾರ್ಡನ್, ವಡ್ಡಪ್ಪ ಜೀನ್ ಕುಂಬಾರಓಣಿ, ಮಡ್ಡಿ ಪೇಟೆ, ಬ್ರೆಸ್ತಾವಾರ ಪೇಟೆ, ಚಂದ್ರಮಾಲೇಶ್ವರ ಚೌಕ ಬಟ್ಟೆ ಬಜಾರ್ ತರಕಾರಿ ಮಾರ್ಕೆಟ್, ಮೇದರವಾಡಿ ಹೊಸ ಅಮೃತ ಆಸ್ಪತ್ರೆ, ಸಂತೋಷಿ ನೊವಿತಾಲ್ ಸೇರಿದಂತೆ ಸುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ. ಹೆಚ್ಚಿನ ಮಾಹಿತಿಗಾಗಿ 24*7 ಗ್ರಾಹಕರ ಸೇವಾ ಕೇಂದ್ರದ ದೂರವಾಣಿ ಸಂಖ್ಯೆ: 08532-226386, 08532-231999ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ಉಪ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಕಾನೂನು ಸಲಹೆಗಾರರ ನೇಮಕಕ್ಕೆ ಅರ್ಜಿ ಆಹ್ವಾನ

❏ ನೈಜ್ಯ ದೆಸೆ ನ್ಯೂಸ್

**ರಾಯಚೂರು: ಡಿಸೆಂಬರ್ 18 (ಕರ್ನಾಟಕ ವಾರ್ತೆ): ಜಿಲ್ಲೆಯ ಕಂದಾಯ ಇಲಾಖೆಯಲ್ಲಿ ಭೂ ಸ್ವಾಧೀನ ಪ್ರಕರಣಗಳಿಗೆ ಸಂಬಂಧಿಸಿದ ವ್ಯಾಜ್ಯಗಳಲ್ಲಿ ಜಿಲ್ಲಾಧಿಕಾರಿಗಳಿಗೆ ಕಾನೂನಿನ ಸಲಹೆ ನೀಡಲು ಕಾನೂನು ಸಲಹೆಗಾರರನ್ನು ನೇಮಿಸಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಸರ್ಕಾರದ ಆದೇಶಗಳನ್ವಯ ಈ ಹಿಂದೆ ನೇಮಿಸಲಾದ ಕಾನೂನು ಸಲಹೆಗಾರರು ಹುದ್ದೆಗೆ ರಾಜೀನಾಮೆಯನ್ನು ನೀಡಿರುವುದರಿಂದ ಜಿಲ್ಲಾಧಿಕಾರಿಗಳ ಕಾರ್ಯಾಲಯದ ಕಾನೂನು ಸಲಹೆಗಾರರ ಹುದ್ದೆಯು ಖಾಲಿ ಇರುತ್ತದೆ.**

ಜಿಲ್ಲಾಧಿಕಾರಿಗಳ ಕಚೇರಿಗಳಲ್ಲಿ ಕಂದಾಯ ಇಲಾಖೆಗೆ ಸಂಬಂಧಿತ ಭೂಕಂದಾಯ, ಭೂ ಮಂಜೂರಾತಿ ನಿಯಮ, ಭೂಸುಧಾರಣಾ, ಭೂಸ್ವಾಧೀನ ಕಾಯ್ದೆ, ನಿಯಮ, ಇನ್ನೀತರ ಕಾಯ್ದೆ, ನಿಯಮಗಳಿಗೆ ಸಂಬಂಧಿಸಿದ ಪ್ರಕರಣಗಳಲ್ಲಿ ಹಾಗೂ ಯಾವುದೇ ನ್ಯಾಯಾಲಯ ವ್ಯಾಜ್ಯಗಳ ಬಗ್ಗೆ ಕಾನೂನು ಸಲಹೆ ನೀಡಲು ಸೃಜಿಸಲಾಗಿರುವ ಕಾನೂನು ಸಲಹೆಗಾರರ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನಿವೃತ್ತ ನ್ಯಾಯಾಧೀಶರು, ನಿವೃತ್ತ ಕಂದಾಯ ಇಲಾಖೆಯ ಅಧಿಕಾರಿ (ನಿವೃತ್ತ ವಿಶೇಷ ಜಿಲ್ಲಾಧಿಕಾರಿ) ಗಳಿಗೆ ಕರ್ತವ್ಯಗಳು, ಜವಾಬ್ದಾರಿಗಳನ್ನು ಮತ್ತು ಮೇಲಾಧಿಕಾ-ರಿಗಳ ಸೂಚನೆಗಳು ಕಡ್ಡಾಯವಾಗಿ ಪಾಲಿಸಬೇಕು.

ಷರತ್ತಿಗೊಳಪಟ್ಟು ಕಾನೂನು ಸಲಹೆಗಾರರಿಗೆ ಒಂದು ನಿರ್ದಿಷ್ಟ ಏಕರೂಪದ ಸಂಚಿತ ವೇತನವನ್ನು ನಿಗದಿಪಡಿಸಿ ಅಂತಹ ವೇತನದ ಮೇರೆಗೆ ಕಾನೂನು ಸಲಹೆಗಾರರಾಗಿ ಕಾರ್ಯನಿರ್ವಹಿಸಲು ಅಸಕ್ತಿಯುಳ್ಳ ನಿವೃತ್ತ ಸರ್ಕಾರಿ, ನ್ಯಾಯಾಂಗ ಇಲಾಖೆಯ ಅಧಿಕಾರಿಗಳನ್ನು, ನಿವೃತ್ತ ನ್ಯಾಯಾಧೀಶರು, ನಿವೃತ್ತ ಕಂದಾಯ ಇಲಾಖೆಯ ಅಧಿಕಾರಿ (ನಿವೃತ್ತ ವಿಶೇಷ ಜಿಲ್ಲಾಧಿಕಾರಿ) ಇವರಿಗೆ 70,000 ಸಾವಿರ ರೂ. ಹಾಗೂ ನಿವೃತ್ತ ಕಂದಾಯ ಇಲಾಖೆ ನೌಕರರು (ನಿವೃತ್ತ ತಹಶೀಲ್ದಾರ್, ಉಪತಹಶೀಲ್ದಾರ್) ಇವ-ರಿಗೆ 40,000 ಸಾವಿರ ರೂ. ಸಂಚಿತ ವೇತನವನ್ನು ಹಾಗೂ ನಿಗದಿಪಡಿಸಿ ಹೊರಗುತ್ತಿಗೆ ಆಧಾರದ ಮೇಲೆ ಷರತ್ತುಗಳನ್ವಯ ನೇಮಿಸಿಕೊಳ್ಳಲು ಉದ್ದೇಶಿಸಲಾಗಿದೆ.

ಅರ್ಹ ಮತ್ತು ಇಚ್ಛೆಯುಳ್ಳ ನಿವೃತ್ತ ಜಿಲ್ಲಾ ನ್ಯಾಯಧೀಶರು ಅಥವಾ ನಿವೃತ್ತ ಹಿರಿಯ ಸಿವಿಲ್ ನ್ಯಾಯಾಧೀಶರು, ನಿವೃತ್ತ ಕಂದಾಯ ಇಲಾಖೆಯ ಅಧಿಕಾರಿ (ನಿವೃತ್ತ ವಿಶೇಷ ಜಿಲ್ಲಾಧಿಕಾರಿ) ನಿವೃತ್ತ



ಕಂದಾಯ ಇಲಾಖೆ ನಿವೃತ್ತ ತಹಶೀಲ್ದಾರ್, ಉಪತಹಶೀಲ್ದಾರರು ಅರ್ಜಿಯನ್ನು ಜನವರಿ 2ರೊಳಗಾಗಿ ಜಿಲ್ಲಾಧಿಕಾರಿಗಳ ಕಚೇರಿಗೆ ಸಲ್ಲಿಸಬಹುದಾಗಿದೆ. ಈ ನೇಮಕಾತಿಯು ನೇಮಕಾತಿ ಆದೇಶದ ದಿನಾಂಕದಿಂದ ಒಂದು ವರ್ಷದ ಅವಧಿಯವರೆಗೆ ಊರ್ಜಿತವಾಗಿರುತ್ತದೆ. ಕಾನೂನು ಸಲಹೆಗಾರರ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನಿವೃತ್ತ ನ್ಯಾಯಾಧೀಶರು ಜಿಲ್ಲಾ ನ್ಯಾಯಾಧೀಶರಾಗಿ ಕಾರ್ಯನಿರ್ವಹಿಸಿ ನಿವೃತ್ತರಾಗಿರಬೇಕು. ಈ ಹುದ್ದೆಯು ಕರ್ತವ್ಯಕ್ಕೆ ಹಾಜರಾದ ದಿನದಿಂದ ಒಂದು ವರ್ಷ ಅಥ-ವಾ ಸರ್ಕಾರದ ಆದೇಶ ಹೊರಡಿಸುವವರೆಗೆ ಇದರಲ್ಲಿ ಯಾವುದೋ ಮೊದಲು ಅಲ್ಲಿಯವರೆಗೆ ತಾತ್ಕಾಲಿಕ ಹಾಗೂ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಕೊಳ್ಳುವ ಷರತ್ತಿಗೊಳಪಟ್ಟಿರುತ್ತದೆ.

ನೇಮಕಾತಿ,ಹಾಲಿ ಕಾರ್ಯನಿರ್ವಹಿಸುತ್ತಿರುವ ಸೇವೆಯು ದಿನದ ಪೂರ್ಣಾವಧಿಯಾಗಿದ್ದು, ಯಾವುದೇ ರೀತಿಯ ಸರ್ಕಾರದ ವಿರುದ್ಧ ಯಾವುದೇ ಪ್ರಕರಣಗಳಲ್ಲಿ ವಕಾಲತ್ತು ವಹಿಸತಕ್ಕದ್ದಲ್ಲ. ಬೇರೆ ಕಂಪನಿ ಇತ್ಯಾದಿಗಳಲ್ಲಿ ಒಪ್ಪಂದ ಮಾಡಿಕೊಂಡು ಕಾರ್ಯನಿರ್ವಹಿಸತಕ್ಕದ್ದಲ್ಲ. ಎಲ್ಲಾ ಪ್ರಕರಣಗಳ ಗೌಪ್ಯತೆ ಕಾಪಾಡಬೇಕು. ಕಾನೂನು ಸಲಹೆಗಾರರ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಲು ನಿವೃತ್ತ ಕಂದಾಯ ಇಲಾಖೆ ಅಧಿಕಾರಿ, ನೌಕರರು ಕಾನೂನು ಪದವೀಧರರಾಗಿರಬೇಕು. ಹಾಗೂ 7 ವರ್ಷಗಳ ಸೇವಾ ಅನುಭವ ಹೊಂದಿರಬೇಕು. ನಿವೃತ್ತ ಜಿಲ್ಲಾ ನ್ಯಾಯಾಧೀಶರಿಗೆ ಹಾಗೂ ನಿವೃತ್ತ ಕಂದಾಯ ಇಲಾಖೆ ಅಧಿಕಾರಿ, ನೌಕರ-ರಿಗೆ ಕಂದಾಯ ನಿಯಮಗಳ ಬಗ್ಗೆ ಅಡಳಿತ, ಇಲಾಖಾ ವಿಚಾರಣೆ ಕುರಿತಂತೆ ಅರಿವು ಹೊಂದಿರಬೇಕು.

ಭೂಸ್ವಾಧೀನ ಪ್ರಕರಣಗಳು, ಸ್ವಾಧೀನ ಪೂರ್ವ ಕಬ್ಜೆ, ಸರ್ಕಾರಿ ಜಮೀನು ರಕ್ಷಣೆ, ತೆರಿಗೆ ಹಣ ಪೋಲಾಗದಂತೆ ತಡೆ, ಇತರೆ ವಿಷಯಗಳ ಕುರಿತಂತ ಪ್ರಕರಣಗಳನ್ನು ವ್ಯವಹ-ರಿಸಿದ ಬಗೆ, ಅನುಭವ ಹೊಂದಿರಬೇಕು. ನ್ಯಾಯಾಲಯ ಪ್ರಕರಣಗಳಲ್ಲಿ ಜಿಲ್ಲಾಧಿಕಾರಿಗಳಿಗೆ ಸಲಹೆ ನೀಡಲು ವ್ಯಾಜ್ಯಗಳನ್ನು ನಡೆಸಲು ಸರ್ಕಾರದ ಪರವಾಗಿ ಆಕ್ಷೇವಣೆ ಸಲ್ಲಿಸುವುದು ದಾಖಲೆಗಳನ್ನು ಪರಿಶೀಲಿಸುವುದು. ಕಂದಾಯ ಇಲಾಖೆಗೆ ಸಂಬಂಧಿಸಿದ ಕಾಯ್ದೆ ಮತ್ತು ನಿಯಮ ಕಾಲ ಕಾಲಕ್ಕೆ ಪುನರಾವಲೋಕನ ಮಾಡಿಕೊಳ್ಳತಕ್ಕದ್ದು. ಕಾನೂನು ಸಲಹೆಗಾರರು ಎಲ್ಲಾ ಪ್ರಕರಣಗಳ ವಿಚಾರಣಾ ಮತ್ತು ಆಕ್ಷೇವಣಾ ಹೇಳಿಕೆ ಹಾಗೂ ಅಫಿಡವಿಟ್ ಇನ್ನಿತರ ವಿವರಗಳನ್ನು ತಮ್ಮ ರಿಜಿಸ್ಟರ್ ಗಳಲ್ಲಿ ನಮೂದು ಮಾಡಿ ಇಟ್ಟುಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ನೂತನ ಜಿಲ್ಲಾಧಿಕಾರಿಗಳ ಕಚೇ-ರಿಯನ್ನು ಕಚೇರಿಯ ವೇಳೆ ಸಂಪರ್ಕ ಮಾಡಬಹುದಾಗಿದೆ ಎಂದು ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಾಹಿತ್ಯ ಸಿಂಚನ

### ತತ್ತಿ

ಇಟ್ರೆ ಇದು ಕೋಳಿ ತತ್ತಿ
ಕೊಟ್ರೆ ಕಾವ ಮರಿಯುತ್ವತ್ತಿ
ಬಿಟ್ರೆ ಕೈ ಆಮ್ಲೆಟ್ ಈ ತತ್ತಿ
ಭಟ್ರೆ ಅರ್ಧ ಬೇಯಿಸಿದ್ರೆ ಹಾಫ್ ರೋಸ್ಟ್ ಈ ತತ್ತಿ
ಡಾಕ್ಟ್ರೆ ರೋಗಿಗೇಳಿ ಇದ ರೋಗನಿರೋಧಕ ಶಕ್ತಿ
ಬಿಟ್ರೆ ಬಿಸಿನೀರಿಗೆ ಕುಚ್ಚಿದತತ್ತಿ
ನುಚ್ಚು ನೂರು ಮಾಡಿದ್ರೆ ಕೈಮೊತ್ವತ್ತಿ
ಹಾಕ್ರಿ ಹಿಟ್ಟಚ್ಚಿ ಎಣ್ಣೆಗೆ ಇದ ಬೊಂಡದತತ್ತಿ
ಇಟ್ರೆ ಕಾದಹಂಚಿಗೆ ಹಸಿತತ್ತಿ ಆಗುತ್ತೆ ಹೂವಿನತತ್ತಿ ಈ ತತ್ತಿ
ಬಿಟ್ರೆ ಸಾರಲ್ಲಿ ಮುಳುಗಿಸಿ ಅಂಡಾಕರಿ ಈ ತತ್ತಿ
ತಿಂದ್ರೆ ಚಿಲ್ಲಿ,ಸಾಸ್ನೊಂದಿಗೆ ಎಗ್ ಚಿಲ್ಲಿ ಈ ತತ್ತಿ
ಬಿಟ್ರೆ ಡ್ರೈ ಆಗಿ, ಎಗ್ ಡ್ರೈ ಈ ತತ್ತಿ
ಬೆರ್ಸಿ ಮಸಾಲಯುಕ್ತ ವ್ಯಂಜನಗಳಿಗೆ ಎಗ್ ಮಸಾಲ ಈ ತತ್ತಿ
ಏನ್ರಿ ಶ್ಯಾವಿಗೆಗೆ ಹಾಕ್ತೀರಾ? ಹಾಕ್ರಿ ನಾ ನೂಡಲ್ಸ್ ತತ್ತಿ
ಹಾಕ್ರಿ ಅನ್ನಕ್ಕೆ ಆಗುತ್ತೆ ಎಗ್ ರೈಸ್ ತತ್ತಿ
ಇಟ್ರೆ ಕುಕರ್ಗೆ ಎಗ್ ಬಿರಿಯಾನಿ ಈ ತತ್ತಿ
ಬೇಕ್ರಿ ಹಿಟ್ಟೊಳಿಟ್ಟು ಕಾದ್ರೆ ಎಗ್ ಪಫ್ ಈ ತತ್ತಿ
ಆದ್ರು ಇದು ಸಸ್ಯಾಹಾರನ,ಮಾಂಸಾಹಾರನ ಅನ್ನೊದು ಯಾರಿಗೆ ಗೊತ್ರಿ
ಯಾಕೊ ತಮ್ಮ ನೀ ತಿನ್ನಂಗಿಲೆನು ಈ ತತ್ತಿ
ನಿಂಗೆ ಯಾರು ಹೇಳಿಲೆನು ಒತ್ತಿ
ರೋಗದಾಗ ರೋಗ ಕಳಿತೈತಿ ಈ ತತ್ತಿ
ಸರಕಾರ ತುಂಬುಸ್ತೈತಿ ನಿಮ್ಮ ಹೊಟ್ಟಿ
ಮತ್ತೆ ಯಾಕ್ಲಾ ಶಾಲಿ ಬಿಟ್ಟಿ
ಶಾಲಿ ಬಿಟ್ಟಿ ನೀ ಕೆಟ್ಟಿ
ಸರಿ ಮಾಡಿಕೊ ನಿನ್ನ ಕೊರಳ ಪಟ್ಟಿ
ಅವ್ವ ನಿಂಗಾಗಿ ಕುಂತೈತಿ ಹೊಟ್ಟಿ ಬಟ್ಟಿ ಕಟ್ಟಿ
ಬಾರ್ಲಾ ನಮ್ಮ ಶಾಲಿ ಕಡಿ ಗಂಟು ಮೂಟಿ ಕಟ್ಟಿ
ಶ್ಯಾಲೆಗ ಮಾಡಬ್ಯಾಡ ನೀ ಮುರಾಬಟ್ಟಿ
ಓದುಲಾ ಜಲೀಲಾ ನೀ ಗಟ್ಟಿ
ಮುಂದೆ ನೀ ಕೊಡುವೆ ನಾಲ್ಕು ಜನಕ ಚಟ್ನಿ ರೊಟ್ಟಿ
ಬಾ ಯವ್ವ ಲೀಲಾ ನಮ್ಮ ಶ್ಯಾಲಿಗಿ ಮುಸುರಿ ತಿಕ್ಕೊದು ಬಿಟ್ಟು
ನಾಳೆ ಹೋಗಬೇಕಬೇ ಹಡದಮನಿ ಬಿಟ್ಟು
ಅಲ್ಲಿ ಕೇಳ್ತಾರಬೇ ತವರು ಮನಿ ಗಂಟು
ನೀ ಅವರಿಗೆ ಕೊಡುವಂಗಾಗ ಗಂಟು
ಬಾರಬೇ ಹಾಕು ಶ್ಯಾಲೇಲಿ ನೀ ಟೆಂಟು
ನಿಮ್ಮ ಮಕ್ಳನ್ನ ಶಾಲಿಗಿ ಕಳಿಸ್ರಿ ಅರ್ಜೆಂಟು
ಮಾಡ್ತೀವಿ ಅವರನ್ನು ಟ್ಯಾಲೆಂಟು
ಆಗ್ತಾರ ಮುಂದ ಅವರು ಸರ್ಕಾರಿ ಸರ್ವೆಂಟು.

ಬಸವರಾಜ ಶಿಕ್ಷಕರು, ಗುಂಜಹಳ್ಳಿ,ಸಾಸಲಮರಿ

## 5 ವರ್ಷದೊಳಗಿನ ಮಕ್ಕಳಿಗೆ 2 ಹನಿ ಪೋಲಿಯೋ ಲಸಿಕೆ ಹಾಕಿಸಿ :ಗಿಣಿವಾರ ಶೇಖರಪ್ಪ

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಡಿಸೆಂಬರ್ 18:* ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು,ತಾಲೂಕಾರೋಗ್ಯಾಧಿಕಾರಿಗಳ ಕಾರ್ಯಾಲಯ ಸಿಂಧನೂರು ಹಾಗೂ ಶಿಕ್ಷಣ ಇಲಾಖೆ , ನಗರ ಪ್ರಾಥಮಿಕ ಆರೋಗ್ಯ ಕೇಂದ್ರ ಸಿಂಧನೂರು ಗಳ ಸಂಯುಕ್ತ ಆಶ್ರಯದಲ್ಲಿ ಪಲ್ಸ್ ಪೋಲಿಯೋ ಕಾರ್ಯಕ್ರಮದ ಕುರಿತು ಜಾಗೃತಿ ಜಾಥಾ ನಡೆಯಿತು.**

ಮಹೆಬೂಬಿಯಾ ಕಾಲೋನಿಯ ಚುನಾಯಿತ ಪ್ರತಿನಿಧಿಯಾದ ಗಿಣಿವಾರ ಶೇಖರಪ್ಪ ಜಾಥಾಗೆ ಚಾಲನೆ ನೀಡಿದರು. ನಂತರ ಮಾತನಾಡಿದ ಅವರು, "ರಾಷ್ಟ್ರವ್ಯಾಪಿ 5 ವರ್ಷದೊಳಗಿನ ಎಲ್ಲ ಮಕ್ಕಳಿಗೆ ಏಕಕಾಲದಲ್ಲಿ ಪಲ್ಸ್ ಪೋಲಿಯೋ ಲಸಿಕೆ ನೀಡಲಾಗುತ್ತದೆ. ಸಾರ್ವಜನಿಕರ ಸಹಕಾರ ಮತ್ತು ಸ್ವಯಂ ಪ್ರೇರಿತ ಲಸಿಕೆ ಹಾಕಿಸುವುದು ಅಗತ್ಯ" ಎಂದರು ನಿಮ್ಮ ಮಕ್ಕಳ ಭವಿಷ್ಯಕ್ಕಾಗಿ ಪೋಲಿಯೋ ಲಸಿಕೆ ಹಾಕಿಸಿ" ಎಂದು ಮಕ್ಕಳೊಂದಿಗೆ ಮಕ್ಕಳಾಗಿ ಘೋಷಣೆ ಕೂಗುವ ಮೂಲಕ ಸಾರ್ವಜನಿಕರಿಗೆ ಕರೆ ನೀಡಿದರು.

ತಾಲೂಕಾ ಹಿರಿಯ ಆರೋಗ್ಯ ಸಹಾಯಕ ಸಂಗನಗೌಡ ಮಾತನಾಡಿ, "5 ವರ್ಷದೊಳಗಿನ ಮಕ್ಕಳಿಗೆ ಡಿಸೆಂಬರ್ 21ರಂದು ಬೂತ್ ಮಟ್ಟದಲ್ಲಿ ಪೋಲಿಯೋ



ಲಸಿಕೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಅದಾದ ಮರು ದಿನದಿಂದ ನಮ್ಮ ಸಿಬ್ಬಂದಿಗಳು ಡಿಸೆಂಬರ್ 22 ರಿಂದ 24 ರ ವರೆಗೆ ಮನೆ ಭೇಟಿ ಮಾಡಿ ಯಾವೂದೆ ಮಗು ಲಸಿಕೆಯಿಂದ ವಂಚಿತರಾಗದಂತೆ ನಿಗಾ ವಹಿಸುತ್ತದೆ ಆದ್ದರಿಂದ ಸಿಬ್ಬಂದಿಯವರು ಮನೆ ಭೇಟಿ ಮಾಡುವುದನ್ನು ಕಾಯದೆ ಸನೀಪದ ಬೂತ್‌ಗಳಿಗೆ ಮಕ್ಕಳನ್ನು ಮೊದಲನೆ ದಿನವೆ ಕರೆದೊಯ್ಯುತ್ತಾ ಲಸಿಕೆ ಹಾಕಿಸಿ" ಎಂದರು.

ಸರ್ಕಾರಿ ಅಕಖ ಉನ್ನತಿಕರಿಸಿದ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರಾದ ಬಸನಗೌಡ ಬಿರಾದಾರ ಮಾತನಾಡಿ, "ಭಾರತ ಪೋಲಿಯೋ ಮುಕ್ತವಾಗಿದ್ದರೂ ಪದೆ ಪದೆ ಇನ್ನೂ ಹಲವು ವರ್ಷಗಳ ವರೆಗೆ ಸರ್ಕಾರ ಕಾರ್ಯಕ್ರಮ ಹಮ್ಮಿಕೊಂಡು ನಿಮ್ಮ ಮಕ್ಕಳಲ್ಲಿ ಪೋಲಿಯೊ ರೋಗ ಹರಡದಂತೆ ನಿಗಾವಹಿಸುತ್ತಿದೆ ಕಾರಣ ಮುಂಜಾಗ್ರತೆಗಾಗಿ ಪ್ರತಿ ವರ್ಷದಂತೆ ಈ ವರ್ಷವು ಲಸಿಕೆ ನೀಡಲಾಗುತ್ತದೆ. ತಪ್ಪದೇ ಪೋಲಿಯೊ ಲಸಿಕೆ ಹಾಕಿಸಿ ಎಂದು ಸಲಹೆ ನೀಡಿದರು. ತಾಲೂಕಾ ಮೇಲ್ವಿಚಾರಕ ಎಫ್.ಎ.ಹಣಗಿ ಶಾಲಾ ಮಕ್ಕಳಿಂದ ಸ್ಲಂ ಘೋಷಿತ ಎಂ.ಬಿ ಕಾಲೋನಿಯ ವ್ರತ್ತದಲ್ಲಿ ಮಕ್ಕಳಿಂದ ಮಾನವ ಸರಪಳಿ ನಿರ್ಮಿಸಿ ಘೋಷಣೆಗಳನ್ನು ಹಾಕಿಸುತ್ತಾ ಗಮನ ಸೆಳೆದು ಮಾತನಾಡಿ "ಹಿಂದೆ ಎಷ್ಟೇ ಸಾರಿ ಲಸಿಕೆ ಕೊಡಿಸಿದ್ದರೂ ಈ ಅಭಿಯಾನದಲ್ಲಿ ತಪ್ಪದೇ ಪೋಲಿಯೊ2ಹನಿ ನಿಮ್ಮ 5ವರ್ಷದ ಮಕ್ಕಳಿಗೆ ಹಾಕಿಸಿ.

ಪೋಲಿಯೋ ಲಸಿಕೆ ಸಂಪೂರ್ಣ ಸುರಕ್ಷಿತ, ಎರಡು ಜೀವರಕ್ಷಕ ಹನಿಗಳು



ಮಗುವಿನ ಬೆಳವಣಿಗೆಗೆ ಸಹಕಾರಿ ಎಂದೆಲು 2020ರಿಂದ ಭಾರತದಲ್ಲಿ ಯಾವುದೇ ಪೋಲಿಯೋ ಪ್ರಕರಣಗಳು ವರದಿಯಾಗಿಲ್ಲ ಮತ್ತು ಭಾರತ ಪೋಲಿಯೋ ಮುಕ್ತ ರಾಷ್ಟ್ರ ಘೋಷಣೆಯಾಗಿದ್ದರೂ, ವಲಸೆ ಮತ್ತು ಗಡಿ ರಾಜ್ಯ ಮತ್ತು ದೇಶ, ಪ್ರದೇಶಗಳಿಂದ ಹೊಸ ಪ್ರಕರಣಗಳ ನಿಯಂತ್ರಣಕ್ಕಾಗಿ ರಾಷ್ಟ್ರೀಯ ಪಲ್ಸ್ ಪೋಲಿಯೋ ಮುಂದುವರೆದಿದೆ. ರಾಷ್ಟ್ರೀಯ ಕಾರ್ಯಕ್ರಮವು ಎಲ್ಲ ಇಲಾಖೆಗಳ ಸಹಯೋಗದೊಂದಿಗೆ ಮೇಲ್ವಿಚಾರಣೆ ನಡೆಯುತ್ತಿದ್ದು, ಘನ ಸರ್ಕಾರಗಳು ಹದ್ದಿನ ಕಣ್ಣಾವಲು ನಡೆಸುತ್ತಿವೆ" ಎಂದರು. ಗ್ರಾಮದ ಪ್ರಮುಖ ಮುಖ್ಯರಸ್ತೆಯಿಂದ ಮಹೆಬೂಬಿಯಾ ಕಾಲೋನಿ ಬೀದಿಗಳಲ್ಲಿ ಶಾಲಾ ಮಕ್ಕಳು, ಸ್ಥಳೀಯರು ಮತ್ತು ಆರೋಗ್ಯ ಸಿಬ್ಬಂದಿ ಪಲ್ಸ್ ಪೋಲಿಯೋ ಕಾರ್ಯಕ್ರಮದ ಘೋಷಣೆ ಕೂಗುತ್ತಾ ಜಾಗೃತಿ ಜಾಥಾ ನಡೆಸಿದರು. ಈ ಸಂದರ್ಭದಲ್ಲಿ ಉಪಕೇಂದ್ರದ ಪಿ.ಎಚ್.ಸಿ.ಓ ತ್ರೇಜಾ, ಆಶಾ ಕಾರ್ಯಕರ್ತರಾದ ಮಾಲನಬಿ, ಕಸ್ತೂರಿ, ಶಿಕ್ಷಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು

## ಅಮರಶಿಲ್ಪಿ ಜಕಣಾಚಾರಿ ದಿನಾಚರಣೆ: ಪೂರ್ವಭಾವಿ ಸಿದ್ಧತಾ ಸಭೆ




❑ ನೈಜ್ಯ ದೆಸೆ ನ್ಯೂಸ್

**ರಾಯಚೂರು: ಡಿಸೆಂಬರ್ 18 (ಕರ್ನಾಟಕ ವಾರ್ತೆ): ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆಯು ಅರ್ಥಪೂರ್ಣವಾಗಿ ನಡೆಯಲು ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.**

ಡಿಸೆಂಬರ್ 17ರ ಬುಧವಾರ ದಂದು ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಪೂರ್ವಭಾವಿ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರು ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ನಗರದ ಪಂಡಿತ ಸಿದ್ದರಾಮ ಜಂಬಲದಿನ್ನಿ ರಂಗಮಂದಿರದಲ್ಲಿ 2026ರ ಜನವರಿ 3ರ ಬೆಳಗ್ಗೆ 11:30ಕ್ಕೆ ದಿನಾಚರಣೆ ನಿಗದಿಯಾಗಿದೆ. ಅಂದು 9 ಗಂಟೆಗೆ ನಗರದ ಬೇರೂನ್ ಕಿಲ್ಲಾದ ಶ್ರೀ ಕಾಳಿಕಾದೇವಿ ದೇವಸ್ಥಾನದಿಂದ ರಂಗಮಂದಿರದವರೆಗೂ ಮೆರವಣಿಗೆ ನಡೆಯಲಿದೆ. ಶಿಷ್ಟಾಚಾರದಂತೆ ಕಾರ್ಯಕ್ರಮ ನಡೆಯಬೇಕು.

ಕಾರ್ಯಕ್ರಮದ ಸ್ಥಳದಲ್ಲಿ ಸ್ವಚ್ಛತೆ, ತಳಿರು ತೋರಣ, ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು ಎಂದು ಅವರು ಸೂಚನೆ ನೀಡಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಉತ್ತರಾದೇವಿ, ಈರಣ್ಣ ಬಡಿಗೇರ, ಸಮಾಜದ ಮುಖಂಡರಾದ ಬ್ರಹ್ಮ ಗಣೇಶ್ ವಕೀಲರು, ಕೆ.ರಾಮು ಗಾಣಧಾಳ, ಗಿರೀಶ್ ಆಚಾರಿ, ಡಾ.ವೆಂಕಟೇಶ್ ಅನ್ವರಿ, ಹಿರಿಯ ಪತ್ರಕರ್ತರಾದ ಮಾರುತಿ ಬಡಿಗೇರ, ಬ್ರಹ್ಮಯ್ಯ, ನಾಗರಾಜ ಪತ್ತಾರ, ಕೆ.ನರಸಪ್ಪ, ರಾಮುಲು, ಸುರೇಶ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು, ವಿವಿಧ ಸಂಘಟನೆಗಳ ಮುಖಂಡರು ಸಭೆಯಲ್ಲಿ ಇದ್ದರು.

## ಅಂಚೆ ಜೀವ ವಿಮೆ ಉತ್ಪನ್ನಗಳ ಮಾರಾಟ ಪ್ರತಿನಿಧಿಗಳ ಆಯ್ಕೆಗೆ ನೇರ ಸಂದರ್ಶನ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು: ಡಿಸೆಂಬರ್ 18 (ಕರ್ನಾಟಕ ವಾರ್ತೆ): ಇಲ್ಲಿನ ಅಂಚೆ ಇಲಾಖೆಯಿಂದ ರಾಯಚೂರು ವಿಭಾಗದಲ್ಲಿ ಅಂಚೆ ಜೀವ ವಿಮೆ ಹಾಗೂ ಗ್ರಾಮೀಣ ಅಂಚೆ ಜೀವ ವಿಮೆ ಉತ್ಪನ್ನಗಳನ್ನು ಮಾರಾಟ ಮಾಡಲು ನೇರ ಪ್ರತಿನಿಧಿಗಳ ಆಯ್ಕೆಗಾಗಿ ನೇರ ಸಂದರ್ಶನಕ್ಕೆ ಆಸಕ್ತ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.**

ಡಿಸೆಂಬರ್ 29ರಂದು ಬೆಳಿಗ್ಗೆ 11ಗಂಟೆಗೆ ರಾಯಚೂರಿನ ಗಂಜ್ ವೃತ್ತದ ಬಳಿರುವ ಅಂಚೆ ಅಧೀಕ್ಷಕರ ಕಚೇರಿಯಲ್ಲಿ ನೇರ ಸಂದರ್ಶನ ಹಮ್ಮಿಕೊಳ್ಳಲಾಗಿದೆ. ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳು 10ನೇ ತರಗತಿ ಪಾಸಾಗಿರಬೇಕು. ವಯಸು ಕನಿಷ್ಠ 18 ಆಗಿರಬೇಕು. ನಿರುದ್ಯೋಗಿ, ಸ್ವಯಂ ಉದ್ಯೋಗ ನಿರತ ಯುವಕರು, ವಿಮಾ ಕಂಪನಿಗಳ ಮಾಜಿ ಏಜೆಂಟರು, ಸಲಹೆಗಾರರು, ಮಾಜಿ ಸೈನಿಕರು, ಅಂಗನವಾಡಿ ಕಾರ್ಯಕರ್ತೆಯರು, ಮಹಿಳಾ ಮಂಡಳದ ಕಾರ್ಯಕರ್ತೆಯರು, ನಿವೃತ್ತ ಪ್ರಧಾನ ಮತ್ತು ಗ್ರಾಮ ಪಂಚಾಯತ್ ಸದಸ್ಯರು ಹಾಗೂ ಅಂಚೆ ವಿಭಾಗದ ಮುಖ್ಯಸ್ಥರಿಗೆ ಸಮಂಜಸವೆಂದು ಕಂಡುಬರುವ ಯಾವುದೇ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಲಾಗುತ್ತದೆ. ನುರಿತ, ಸಂವಹನಾ ಕಲೆ ಹಾಗೂ ವಿಮಾ ಮಾರಾಟ ಕ್ಷೇತ್ರದಲ್ಲಿ ಪೂರ್ವಾನುಭವ ಹೊಂದಿರುವವರಿಗೆ ಆದ್ಯತೆ ನೀಡಲಾಗುತ್ತಿದೆ. ಆಯ್ಕೆಯಾದ ಅಭ್ಯರ್ಥಿಗಳು 5 ಸಾವಿರ ರೂ.ಗಳ ರಾಷ್ಟ್ರೀಯ ಉಳಿತಾಯ ಪತ್ರ ಅಥವಾ ಕಿಸಾನ್ ವಿಕಾಸ ಪತ್ರದ ರೂಪದಲ್ಲಿ ಭದ್ರತಾ ಠೇವಣಿ ಇಡಬೇಕು. ಆಯ್ಕೆಯಾದ ಪ್ರತಿನಿಧಿಗಳಿಗೆ ವ್ಯವಹಾರಕ್ಕೆ ತಕ್ಕಂತೆ ಸೂಕ್ತ ಕಮಿಷನ್ ನೀಡಲಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ಹತ್ತಿರದ ಅಂಚೆ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ ಎಂದು ರಾಯಚೂರು ವಿಭಾಗದ ಅಂಚೆ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ರಾಯಚೂರು ಜಿಲ್ಲೆಯಲ್ಲಿ ತೊಗರಿ ಖರೀದಿ ಕೇಂದ್ರಗಳು ಆರಂಭ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು: ಡಿಸೆಂಬರ್ 18 (ಕರ್ನಾಟಕ ವಾರ್ತೆ): ಕೇಂದ್ರ ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿಯಲ್ಲಿ 2025-26ನೇ ಸಾಲಿನಲ್ಲಿ ರೈತರಿಂದ ಎಫ್.ಎ.ಕ್ಯೂ ಗುಣಮಟ್ಟದ ತೊಗರಿ ಉತ್ಪನ್ನ ಖರೀದಿಸಲು ರಾಯಚೂರು ಜಿಲ್ಲೆಯಲ್ಲಿ ಖರೀದಿ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ತೊಗರಿ ಮಾರಾಟ ಮಾಡಿ ಸರ್ಕಾರದ ಯೋಜನೆಯ ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಜಿಲ್ಲಾ ಟಾಸ್ಕ್ ಪೋರ್ಸ್ ಸಮಿತಿಯ ಅಧ್ಯಕ್ಷರು ಆಗಿರುವ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಅವರು ಜಿಲ್ಲೆಯ ರೈತರಲ್ಲಿ ಮನವಿ ಮಾಡಿದ್ದಾರೆ.**



ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ, ಗೆ 8000 ರೂ.ಗಳಂತೆ ಬೆಂಬಲ ಬೆಲೆ ರೈತರಿಂದ ತೊಗರಿ ಉತ್ಪನ್ನವನ್ನು ಪ್ರತಿ ಎಕರೆಗೆ 4 ಕ್ವಿಂಟಾಲ್ ಹಾಗೂ ತೊಗರಿ ಬೆಳೆದ ಜಮೀನಿನ ವಿಸ್ತೀರ್ಣಕ್ಕೆ ಅನುಗುಣವಾಗುವಂತೆ ಖರೀದಿ ಪ್ರಮಾಣ ನಿಗಧಿಪಡಿಸಿದ್ದು, ಎಫ್.ಎ.ಕ್ಯೂ ಗುಣಮಟ್ಟದ ಪ್ರತಿ ಕ್ವಿಂಟಾಲ್ ಯೋಜನೆಯಡಿಯಲ್ಲಿ ಖರೀದಿಸಲಾಗುವುದು. ಆಸಕ್ತ ರೈತರಿಗೆ ದಿನಾಂಕ 17-12-2025 ರಿಂದ ರೈತರ ನೋಂದಣಿ ಕಾಲಾವಧಿಯನ್ನು 80 ದಿನಗಳವರೆಗೆ ನಿಗದಿ ಮಾಡಿದೆ. ರೈತ ಬಾಂಧವರು ಫ್ರೂಟ್ಸ್ ಐ.ಡಿ, ಆಧಾರ್ ಕಾರ್ಡ್, ಪಹಣಿಯೊಂದಿಗೆ ತಮ್ಮ ಹತ್ತಿರದ ಖರೀದಿ ಕೇಂದ್ರಗಳಲ್ಲಿ ಹೆಸರು ನೋಂದಾಯಿಸಬೇಕು ಎಂದು ಜಿಲ್ಲಾಧಿಕಾರಿಗಳು ಮನವಿ ಮಾಡಿದ್ದಾರೆ.

## ಸಿಂಧನೂರಿನಲ್ಲಿ ಭತ್ತ ಅಭಿವೃದ್ಧಿ ಮಂಡಳಿ ಸ್ಥಾಪನೆಗೆ ಬೆಳಗಾವಿ ಸದನದಲ್ಲಿ ಬಸನಗೌಡ ಬಾದರ್ಲಿ ಒತ್ತಾಯ

❑ ನೈಜ್ಯ ದೆಸೆ ನ್ಯೂಸ್

**ವಿಧಾನ ಪರಿಷತ್ ಶಾಸಕ ಬಸನಗೌಡ ಬಾದರ್ಲಿ ಅವರು, ಜೀವನಾಡಿ ತುಂಗಭದ್ರ ಕ್ರಸ್ಟ್ ಗೇಟ್ ಗಳ ಕುರಿತು, ಕರ್ನಾಟಕ ತೊಗರಿ ಅಭಿವೃದ್ಧಿ ಮಂಡಳಿ ಹಾಗೂ ಭತ್ತ ಅಭಿವೃದ್ಧಿ ಮಂಡಳಿಯನ್ನು ಸಿಂಧನೂರು ತಾಲ್ಲೂಕಿನಲ್ಲಿ ಸ್ಥಾಪನೆ ಮಾಡುವಂತೆ ಬೆಳಗಾವಿಯಲ್ಲಿ ನಡೆಯುತ್ತಿರುವ ಚಳಿಗಾಲದ ಅಧಿವೇಶನದಲ್ಲಿ ಶೂನ್ಯ ವೇಳೆಯಲ್ಲಿ ಒತ್ತಾಯಿಸಿದ್ದಾರೆ.**



ಬೆಳಗಾವಿ ಚಳಿಗಾಲದ ಅಧಿವೇಶನದಲ್ಲಿ ಸದನದ ಶೂನ್ಯದ ವೇಳೆಯಲ್ಲಿ ಪ್ರಸ್ತಾಪಿಸಿದ ಅವರು, ರಾಯಚೂರು, ಕೊಪ್ಪಳ ಹಾಗೂ ಬಳ್ಳಾರಿ ಜಿಲ್ಲೆಯ ಭತ್ತ ಬೆಳೆಯುವ ರೈತರ ಬಲವರ್ಧನೆಯ ಹಿತದೃಷ್ಟಿಯಿಂದ 'ಕರ್ನಾಟಕ ತೊಗರಿ ಅಭಿವೃದ್ಧಿ ಮಂಡಳಿ' ಹಾಗೂ 'ಕಾಫಿ ಅಭಿವೃದ್ಧಿ ಮಂಡಳಿ'ಯ ರೀತಿಯಲ್ಲಿ ನಮ್ಮ ಸಿಂಧನೂರು ತಾಲೂಕಿನಲ್ಲಿಯೂ ಸಹ ರಾಜ್ಯ ಸರ್ಕಾರದಿಂದ 'ಭತ್ತ ಅಭಿವೃದ್ಧಿ ಮಂಡಳಿ'ಯನ್ನು ಸ್ಥಾಪನೆ ಮಾಡುವಂತೆ ಮನವಿ ಮಾಡಿದ್ದಾರೆ.

ಒಟ್ಟಾರೆಯಾಗಿ ಬೆಳಗಾವಿ ಚಳಿಗಾಲದ ಅಧಿವೇಶನ ಪ್ರಾರಂಭಗೊಂಡ ದಿನದಿಂದ ಎಂಎಲ್ಸಿ ಬಸನಗೌಡ ಬಾದರ್ಲಿಯವರು ಸಿಂಧನೂರು ತಾಲೂಕಿನ ಸಕಲ ಮೂಲಭೂತ ಸಮಸ್ಯೆಗಳ ಕುರಿತು, ವಿದ್ಯಾರ್ಥಿ ಯುವ ಜನತೆಯ ಕುರಿತು, ರೈತಾಪಿ ಜನರ ಕುರಿತು ವಿವಿಧ ವಿಷಯಗಳ ಬಗ್ಗೆ ಸದನದಲ್ಲಿ ಚರ್ಚೆ ನಡೆಸುತ್ತಿದ್ದು, ಎಂಎಲ್ಸಿ ಬಸನಗೌಡ ಬಾದರ್ಲಿ ಹೇಳಿದ್ದನ್ನ ಸರ್ಕಾರ ಎಷ್ಟರಮಟ್ಟಿಗೆ ಪರಿಗಣಿಸುತ್ತದೆ ಎನ್ನುವುದು ಕಾದು ನೋಡಬೇಕು.

## ದೀಕ್ಷೆ ಪಡೆದಲ್ಲಿ ಮೋಕ್ಷಕ್ಕೆ ದಾರಿ ಯುವಕ ಕು.ಲವೇಶ ಸಿಂಘ್ವಿ

❑ ನೈಜ್ಯ ದೆಸೆ ನ್ಯೂಸ್

**ಕು.ಲವೇಶ ಸಿಂಘ್ವಿ ಜೈನ ತಮ್ಮ 19ನೇ ವಯಸ್ಸಿನಲ್ಲಿ ಸಂಸಾರದ ಆಸಕ್ತಿಯನ್ನು ತೊರೆದು, ಶ್ರೀಮಹಾವೀರ ಸ್ವಾಮಿಯವರ ಆದರ್ಶಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಇದೇ ತಿಂಗಳು ಡಿಸೆಂಬರ್ 25 ರಂದು ಬೆಂಗಳೂರು ಮಾಗಡಿ ರಸ್ತೆಯಲ್ಲಿರುವ ಹೀಟಾ ಗಾರ್ಡನ್ ನಲ್ಲಿ ದೀಕ್ಷೆ ತೆಗೆದುಕೊಳ್ಳಲಿದ್ದಾರೆ.**

ಅದಕ್ಕೂ ಮುನ್ನ ಡಿ.21 ಭಾನುವಾರದಂದು ನಗರದ ಹಳೇ ಬಜಾರ್ ನಿಂದ ಹಿಡಿದು ಪ್ರಮುಖ ರಸ್ತೆಗಳ ಮೂಲಕ ಸಾರೋಟ್ ನಲ್ಲಿ ದೀಕ್ಷೆ ಪಡೆಯುವ ಕು.ಲವೇಶ ಸಿಂಘ್ವಿ ಜೈನ ಅವರನ್ನು ಸಮಾಜದ ಬಂಧು-ಬಾಂಧವರು ಒಗ್ಗೂಡಿ ಜೈನ್ ಕಲ್ಯಾಣ ಮಂಟಪದವರೆಗೂ ಭವ್ಯ ಮೆರವಣಿ ಮಾಡಲಾಗುವುದು. ತದನಂತರ ಅವರಿಗೆ ಅಭಿನಂದನಾ ಸಮಾರಂಭ ಏರ್ಪಡಿಸಲಾಗಿದೆ




ಎಂದು ಜೈನ ಸಮಾಜದ ಮುಖಂಡರಾದ ರಾಜೇಂದ್ರಕುಮಾರ ಜೈನ ತಿಳಿಸಿದರು. ನಗರದ ಪತ್ರಿಕಾ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಜೈನ ಧರ್ಮದ ಸಂಜಯ ಸಿಂಘ್ವಿ ಹಾಗೂ ರಚನಾ ಸಿಂಘ್ವಿ ಇವರ ದಂಪತಿಗಳಿಗೆ ಕು.ಲವೇಶ, ಕು.ಜಿತೇಶ, ಕು.ಲೋಕೇಶ, ಎಂಬ 3 ಜನ ಮಕ್ಕಳಿದ್ದು, ಹಿರಿಯ ಮಗ ಕು.ಲವೇಶ ಬಿಕಾಂ ಪದವಿ ಓದುತ್ತಿರುವಾಗಲೇ ಧರ್ಮದ ಬಗ್ಗೆ ಹಲವಾರು ಪ್ರವಚನಗಳನ್ನು ಕೇಳಿ ತಿಳಿದುಕೊಂಡು ಮನ ಪರಿವರ್ತನೆಯಾಗಿ ಪೂಜ್ಯರಾದ ಗುರುದೇವ ಶ್ರೀನರೇಶ ಮುನಿಜೀಯವರ ಶಿಷ್ಯರಾಗಿ ದೀಕ್ಷಾಗ್ರಹಣ ಪಡೆಯಲಿದ್ದಾರೆ.

ಹಿಂದೂ, ಜೈನ, ಬೌದ್ಧ ಧರ್ಮಗಳಲ್ಲಿ ಗುರುವಿನಿಂದ ಶಿಷ್ಯನಿಗೆ ಧಾರ್ಮಿಕ ಜ್ಞಾನ ಮತ್ತು ಆಧ್ಯಾತ್ಮಿಕ ಮಾರ್ಗದರ್ಶನ ನೀಡುವ ಒಂದು ಪವಿತ್ರ ಆಚರಣೆ, ಇದರಲ್ಲಿ ಮಂತ್ರಗಳನ್ನು ನೀಡುವುದು, ಹೊಸ ಪದ್ಧತಿ, ಹೊಸ ಬದ್ಧತೆ, ತೆಗೆದುಕೊಳ್ಳುವುದು ಮತ್ತು ಆಧ್ಯಾತ್ಮಿಕ ಬೆಳವಣಿಗಾಗಿ ಪವಿತ್ರೀಕರಣಗೊಳ್ಳುವುದು ಇದರ ಮುಖ್ಯ ಉದ್ದೇಶವಾಗಿದೆ. ಇದು ಲೌಕಿಕ, ಅಲೌಕಿಕ, ಜೀವನದಿಂದ ಸಂಪೂರ್ಣವಾಗಿ ಹೊರಬಂದು ಆಧ್ಯಾತ್ಮಿಕತೆಯ ಹಾದಿಯಲ್ಲಿ ಸಾಗಲು ಇದು ಒಂದು ಅವಕಾಶ ಮತ್ತು ಆರಂಭದ ಸಂಕೇತವಾಗಿದೆ. ಧರ್ಮ ಗುರುಗಳ ಸಮಕ್ಷಮದಲ್ಲಿ ದೀಕ್ಷೆ ಪಡೆಯಲು ಯುವಕ ಉತ್ಸುಕನಾಗಿದ್ದಾನೆ.

ಸುಮಾರು 1995 ರಿಂದಲೂ ಸಹ ಸಿಂಧನೂರಿನಲ್ಲಿ ಈ ದೀಕ್ಷೆ ಪಡೆಯುವ ಪ್ರಕ್ರಿಯೆ ಪ್ರಾರಂಭವಾಗಿದೆ. ಇಲ್ಲಿಯವರೆಗೂ 11 ಜನ ಸ್ತ್ರೀಯರು, 3 ಜನ ಪುರುಷರು, ಸೇರಿ ಒಟ್ಟು 14 ನೇ ವ್ಯಕ್ತಿ ದೀಕ್ಷೆ ಪಡೆಯುವವರಾಗಿದ್ದಾರೆಂದು ಮಾಹಿತಿ ನೀಡಿದರು. ದೀಕ್ಷೆ ಪಡೆಯಲು ಮುಂದಾದ ಯುವಕ ಕು.ಲವೇಶ ಮಾತನಾಡಿ, ಸಂಸಾರದಲ್ಲಿ ಸು:ಖ ದು:ಖ ಹಾಗೂ ಜಂಜಾಟಗಳಿವೆ, ಆದರೆ ಆಧ್ಯಾತ್ಮಿಕ ಮತ್ತು ದೀಕ್ಷೆ ಪಡೆದಲ್ಲಿ ಕೇವಲ ಮೋಕ್ಷಕ್ಕೆ ಮಾತ್ರ ದಾರಿ ಎಂದು ತಿಳಿದುಕೊಂಡು ಇಂತಹ ನಿರ್ಧಾರ ತೆಗೆದುಕೊಂಡಿದ್ದೇನೆ ಎಂದರು. ಈ ವೇಳೆ: ಸಮಾಜದ ಮುಖಂಡರಾದ ಸುಭಾಷ್ ಸಕಲೇಚ, ಸಿ.ಎ.ಮಹಾವೀರ, ಜೆಡಿಎಸ್ ಯುವ ಮುಖಂಡ ಮಹಾವೀರ ಜೈನ, ಜಿತೇಶ ಜೈನ, ಇದ್ದರು.

## ನೇಮಕಾತಿ ಪ್ರಕಟಣೆ

ಪೋಷಣ್ ಅಭಿಯಾನ ಯೋಜನೆಯಡಿ ವಿವಿಧ ಹುದ್ದೆಗಳಿಗೆ ಅರ್ಜಿ ಆಹ್ವಾನ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಅನುಷ್ಠಾನಗೊಳಿಸುತ್ತಿರುವ ಪೋಷಣ್ ಅಭಿಯಾನ ಯೋಜನೆಯಡಿ ತಾತ್ಕಾಲಿಕವಾಗಿ ಗುತ್ತಿಗೆಆಧಾರದ ಮೇಲೆ ಈ ಕೆಳಕಂಡ ಹುದ್ದೆಗಳಿಗೆ ನೇಮಿಸಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಅರ್ಜಿ ಸಲ್ಲಿಸ ಬಯಸುವವರು ಸ್ವವಿವರ (Resume) ದ ಪ್ರತಿ ಹಾಗೂ ಅಗತ್ಯ ದಾಖಲೆಗಳೊಂದಿಗೆ ದಿನಾಂಕ: 23-12-2025ರ ಸಂಜೆ 5.30 ಗಂಟೆಯೊಳಗೆ ನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಪಿಡಬ್ಲ್ಯೂಡಿ ಕಟ್ಟಡ, ಆನಂದ ರಾವ್ ವೃತ್ತ, ಬೆಂಗಳೂರು-560009 ಇಲ್ಲಿ ಖುದ್ದಾಗಿ/ ಅಂಚೆ ಮೂಲಕ ಸಲ್ಲಿಸಬಹುದಾಗಿದೆ. ಹೆಚ್ಚಿನ ವಿವರಗಳನ್ನು ಇಲಾಖೆಯ website:https://dwed.karnataka.gov.in ನಲ್ಲಿವಿಭಾಗದಲ್ಲಿ ನೋಡಬಹುದು. ದಿನಾಂಕ: 23-12-2025

## ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮ ಕುರಿತು ಜಾಥಾ ಕಾರ್ಯಕ್ರಮ

❑ ನೈಜ್ಯ ದೆಸೆ ನ್ಯೂಸ್

ಸಿಂಧನೂರು ಡಿಸೆಂಬರ 17: ಜಿಲ್ಲಾಡಳಿತ ಜಿಲ್ಲಾ ಪಂಚಾಯತ್ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಮತ್ತು ಪ್ರಾಥ-ಮಿಕ ಆರೋಗ್ಯ ಕೇಂದ್ರ ಜವಳಗೇರಾ ಇವರ ಸಂಯುಕ್ತ ಆಶ್ರಯದಲ್ಲಿ ಪಲ್ಸ್ ಪೋಲಿಯೋ ಕಾರ್ಯಕ್ರಮ ಕುರಿತು ಜಾಗೃತಿ ಜಾಥಾ ನೆಡೆಯಿತು ಪ್ರಾಥಮಿಕಆರೋಗ್ಯಕೇಂದ್ರದವೈದ್ಯಾಧಿಕಾರಿಗಳಾದ ಡಾಕ್ಟರ ಉಮೇಮಾ ಅಮೇರಾ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು ರಾಷ್ಟ್ರದ್ಯಾಂತ 5 ವರ್ಷದ ಒಳಗಿನ ಎಲ್ಲಾ ಮಕ್ಕಳಿಗೆ ಏಕಕಾಲದಲ್ಲಿ ಪಲ್ಸ್ ಪೋಲಿಯೋ ಹನಿ ಹಾಕಲಾಗುತ್ತದೆ ಸಾರ್ವಜನಿಕರು ತಮ್ಮ ಮಕ್ಕಳಿಗೆ ತಪ್ಪದೇ ಡಿಸೆಂಬರ್ 21ರಂದು ಪೋಲಿಯೋ ಭೂತಗಳಿಗೆ ನಿಮ್ಮ ಮಕ್ಕಳನ್ನು ಕರೆದೊಂದು



ತಪ್ಪದೇ ಲಸಿಕೆಯನ್ನು ಕೊಡಿಸಬೇಕು ಎಂದರು. ನಂತರ ಮಾತನಾಡಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರಾದ ಹನುಮಂತಪ್ಪ ನಾಯಕ ಅವರು ಭಾರತ ಪೋಲಿಯೋ ಮುಕ್ತವಾಗಿದ್ದರೂ ಪಕ್ಕದ ರಾಷ್ಟ್ರಗಳಲ್ಲಿರುವ ಪೋಲಿಯೋ ಪ್ರಕರಣಗಳಿಂದ ಮುಂಜಾಗ್ರತ ವಹಿಸಿ ಪ್ರತಿವರ್ಷ ಮಕ್ಕಳಿಗೆ ಪೋಲಿ ಹನಿ ಹಾಕಲಾಗುತ್ತದೆ ತಪ್ಪದೇ ತಮ್ಮ ಮಕ್ಕಳಿಗೆ ಲಸಿಕೆಯನ್ನು ಹಾಕಿಸಬೇಕು ಎಂದರು.

ನಂತರದಲ್ಲಿ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಬಾಲಪ್ಪ ನಾಯಕ ಶಾಲಾ ಮಕ್ಕಳಿಂದ ಘೋಷಣೆಗಳನ್ನು ಹಾಕಿಸಿದರು. ಹಿಂದೆ ಎಷ್ಟೇ ಬಾರಿ ಪೋಲಿಯೋ ಲಸಿಕೆ ಕೊಡಿಸಿದ್ದರು ಅಭಿಯಾನದಲ್ಲಿ ತಪ್ಪದೆ ಲಸಿಕೆಯನ್ನು ಹಾಕಿಸಬೇಕು ಪೋಲಿಯೋ ಲಸಿಕೆಯ ಸಂಪೂರ್ಣ ಸುರಕ್ಷಿತ ಎರಡು ಜೀವ ರಕ್ಷಕ ಹನಿಗಳನ್ನು ತಪ್ಪದೇ ನಿಮ್ಮ ಮಕ್ಕಳ ಆರೋಗ್ಯದ ಗೆಲುವಿಗಾಗಿ ಹಾಕಿಸಬೇಕು ಮಕ್ಕಳಿಂದ ಗ್ರಾಮದ ಪ್ರಮುಖ ಬೀದಿಗಳಲ್ಲಿ ಹೋಲಿಯ ಕುರಿತು ಜಾಗೃತಿ ಜಾಥ-ಾವನ್ನು ನೆಡೆಸಲಾಯಿತು ಎಂದರು. ಈ ಸಂದರ್ಭದಲ್ಲಿ ಆರೋಗ್ಯ ನಿರೀಕ್ಷಣಾಧಿಕಾ-ರಿಗಳಾದ ಮಹೇಶ, ಅಂಬಮ್ಮ ,ಉದಯಕುಮಾರ , ಸಿಬ್ಬಂದಿ ವರ್ಗದವರು ಶಿಕ್ಷಕರು ವಿದ್ಯಾರ್ಥಿ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

## ವೃಕ್ಷ ಮಾತೆಗೆ ವನಸಿರಿ ಹಸಿರು ನಮನ ಸಲ್ಲಿಸುವ ಕಾರ್ಯ ಶ್ಲಾಘನೀಯ ಶ್ರೀ.ಷ.ಬ್ರ.ಶಿವಯೋಗಿ ಶಿವಾಚಾರ್ಯ ಸ್ವಾಮಿಗಳು ರೌಡಕುಂದ

❑ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ನಗರದ ಶ್ರೀ ಡಿ.ದೇವರಾಜ ಅರಸು ಮೆಟ್ರಿಕ್ ನಂತರ ಬಾಲಕಿಯರ ವಸತಿ ನಿಲಯ (ಹೊಸದು) ಆವರಣದಲ್ಲಿ ವನಸಿರಿ ಪೌಂಡೇಷನ್(ರಿ) ರಾಯಚೂರು ವತಿಯಿಂದ ವೃಕ್ಷಮಾತೆ ಸಾಲುಮರದ ತಿಮ್ಮಕ್ಕ ಅವರಿಗೆ ಶ್ರದ್ಧಾಂಜಲಿ ಸಲ್ಲಿಸುವ ಪ್ರಯುಕ್ತ 114 ಸಸಿಗಳನ್ನು ನೆಡುವ ಮೂಲಕ ಹಸಿರು ನಮನ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.



ಕಾರ್ಯಕ್ರಮವನ್ನು ಸಸಿ ನಿರುಣಿಸುವ ಮೂಲಕ ಚಾಲನೆ ನೀಡಿದ ರೌಡಕುಂದ ಮಠದ ಶ್ರೀ.ಷ.ಬ್ರ.ಶಿವಯೋಗಿ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ ಹಸಿರೇ ಹುಸಿರು ಎನ್ನುವ ಕಾರ್ಯಕ್ರಮದಲ್ಲಿ ಹಸಿರಿಗೆ ನಮನ ಸಲ್ಲಿಸುವ ಕಾರ್ಯವಾಗುತ್ತಿದೆ ಈ ಒಂದು ಕಾರ್ಯದಲ್ಲಿ ತಾಯಂದಿರು, ವಿದ್ಯಾರ್ಥಿಗಳು ಪ್ರತಿಯೊಬ್ಬರೂ ಗಿಡನೆಟ್ಟು ಬೆಳಸಿ ಸಾಲುಮರದ ತಿಮ್ಮಕ್ಕ ಅವರಂತೆ ಆಗಬೇಕು.ಸಾಲುಮರದ ತಿಮ್ಮಕ್ಕ ಅವರು ಮಕ್ಕಳಿಲ್ಲ ಎಂದು ಕೊರಗದೆ ಗಿಡಗಳನ್ನೇ ಮಕ್ಕಳೆಂದು ಪಾಲನೆ ಪೋಷಣೆ ಮಾಡಿದ್ದಾಳೆ.ತಾಯಿ ವೃಕ್ಷ ಮಾತೆ ಸಾಲುಮರದ ತಿಮ್ಮಕ್ಕ ಅವರು ನವಂಬರ್ 14 ಮಕ್ಕಳ ದಿನಾಚರಣೆಯ ದಿನದಂದೆ ತಮ್ಮ ಕೊನೆಯುಸಿರೆಳೆದಿದ್ದಾರೆ. ವೃಕ್ಷ ಮಾತೆಯ ಆರ್ಶಿವಾದದೊಂದಿಗೆ ವನಸಿರಿ ತಂಡ ಹಾಗೂ ಅಮರೇಗೌಡ ಮಲ್ಲಾಪುರ ಅವರು ಸಿಂಧನೂರು ನಗರವನ್ನು ಇಂದು ಸುಂದರ ಮತ್ತು ಹಸಿರುನಿಂದ ಕಂಗೊಳಿಸುವಂತೆ ಮಾಡಿದ್ದಾರೆ. ಇದು ನಾಡಿನಲ್ಲಡೆ ವನಸಿರಿ ತಂಡದ ಗೌರವವನ್ನು ಹೆಚ್ಚಿಸುತ್ತದೆ.ಹರಗುರು ಚರಮೂರ್ತಿಗಳ ಆರ್ಶಿವಾದ ಅಮರೇಗೌಡ ಮಲ್ಲಾಪುರ ಅವರ ಮೇಲೆ ಸದಾಕಾಲ ಇರಲಿದೆ ಎಂದು ಆರ್ಶಿವದಿಸಿದರು. ರಸ್ತೆಯುದ್ಧಕ್ಕೂ ವಿದ್ಯಾರ್ಥಿಗಳು ಎಲ್ಲರೂ ಸೇರಿ ಕೈಯಲ್ಲಿ ಗಿಡಗಳನ್ನು ಹಿಡಿದು ಪೂಜ್ಯರಿಗೆ ಬಿಲ್ವಪತ್ರಿ ಸಸಿ ನೀಡಿ ಸ್ವಾಗತಿಸಲಾಯಿತು.ನಂತರ ಗಣ್ಯವ್ಯಕ್ತಿಗಳು ಸಾಲುಮರದ ತಿಮ್ಮಕ್ಕ ಅವರ ಭಾವಚಿತ್ರಕ್ಕೆ ಪುಷ್ಪರ್ಚನೆ ಸಲ್ಲಿಸಿದರು. ಇದೇವೇಳೆ ಪರಿಸರ ರಾಜ್ಯ ಪ್ರಶಸ್ತಿ ಪುರಸ್ಕೃತ ಹಾಗೂ ವನಸಿರಿ ಪೌಂಡೇಷನ್ ಸಂಸ್ಥಾಪಕ ಅಧ್ಯಕ್ಷ ಅಮರೇಗೌಡ ಮಲ್ಲಾಪುರ ಹಾಗೂ ಓಂ ಶಾಂತಿ ಪಾರ್ವತಿ ಅಮ್ಮನವರು,ಃ-ಅಃ ತಾಲೂಕ ದಂಡಧಿಕಾರಿಗಳಾದ ಲಿಂಗಪ್ಪ ಅಂಗಡಿ,ಅ-ರಣ್ಯ ಅಧಿಕಾರಿ ವಿಜಯಲಕ್ಷ್ಮಿ,ಅರುಣಾ, ಮಲ್ಲಿಕ್,ಮೌನೇಶ ಸಾಲ್ವಡಗಿ,ವನಸಿರಿ ಪೌಂಡೇಷನ್ ರಾಜ್ಯ ಜಾಲತಾಣ ಅಧ್ಯಕ್ಷ ಚನ್ನಪ್ಪ ಕೆ ಹೊಸಹಳ್ಳಿ,ಮಸ್ಕಿ ತಾಲೂಕ ಅಧ್ಯಕ್ಷ ರಾಜು ಪತ್ತಾರ ಬಳಗಾನೂರು,ಸದಸ್ಯ ಆನಂದ ಗುಂಜಳ್ಳಿ,ವಸತಿ ನಿಲಯದ ಶ್ರೀಮತಿ ಸುವರ್ಣ,ಶ್ರೀಮತಿ ವೀಣಾ, ಮಲ್ಲಿಕಾರ್ಜುನ,ಲೋಕೇಶ,ಶ್ರೀ ಮತಿ ಕಮಲ,ಹುಸೇನಪ್ಪ, ಅಮರೇಶ,ದ್ಯಾಮಣ್ಣ,ವೆಂಕಟೇಶ ಹಾಗೂ ನಿಲಯದ ಅಡುಗೆ ಸಿಬ್ಬಂದಿಗಳು,ವಿದ್ಯಾರ್ಥಿಗಳು ಭಾಗವಹಿಸಿ ಯಶಸ್ವಿಗೊಳಿಸಿದರು.

## ಪಲ್ಸ್ ಪೋಲಿಯೋ ಕಾರ್ಯಕ್ರಮದ ತಾಲೂಕು ಮಟ್ಟದ ಟಾಸ್ಕ್ ಪೋರ್ಸ್ ಸಭೆ




❑ ನೈಜ್ಯ ದೆಸೆ ನ್ಯೂಸ್

ಮಾನ್ವಿ: ಪಟ್ಟಣದ ತಹಸೀಲ್ದಾರ್ ಕಚೇರಿ ಸಭಾಂಗಣದಲ್ಲಿ ಪಲ್ಸ್ ಪೋಲಿಯೋ ಕಾರ್ಯಕ್ರಮದ ತಾಲೂಕು ಮಟ್ಟದ ಟಾಸ್ಕ್ ಪೋರ್ಸ್ ಸಭೆಯಲ್ಲಿ ಪಲ್ಸ್ ಪೋಲಿಯೋ ಕಾರ್ಯಕ್ರಮದ ಭಿತ್ತಿ ಪತ್ರಗಳನ್ನು ಬಿಡುಗಡೆಗೊಳಿಸಿ ತಾಲೂಕ ವೈದ್ಯಾಧಿಕಾರಿ ಡಾ.ಶರಣಬಸವರಾಜ ಮಾತನಾಡಿ ತಾಲೂಕಿನಾದ್ಯಂತ ಡಿ.21 ರಿಂದ ಡಿ.24 ರವರೆಗೆ ನಡೆಯಲಿರುವ ಪೋಲಿಯೊ ಮುಕ್ತ ಭಾರತ-ಪಲ್ಸ್ ಪೋಲಿಯೊ ಅಭಿಯಾನ ಅಂಗವಾಗಿ ಪೋಲಿಯೋ ಲಸಿಕೆಯನ್ನು ನೀಡುವುದಕ್ಕೆ 0-5 ವರ್ಷದ 47,920 ಮಕ್ಕಳನ್ನು ಆರೋಗ್ಯ ಇಲಾಖೆಯಿಂದ ಗುರುತಿಸಲಾಗಿದ್ದು ಲಸಿಕೆ ಹಾಕುವುದಕ್ಕೆ 221 ಟೀಮ್ ಗಳನ್ನು ರಚಿಸಲಾಗಿದೆ. ಹಾಗೂ33 ಸಂಚಾರಿ ಟೀಮ್ ಗಳ ಮೂಲಕ ವ್ಯಾಕ್ಸಿನ್ ಸಾಮಾಗ್ರಿಗಳನ್ನು ತಲುಪಿಸುವುದಕ್ಕೆ ಕ್ರಮ ಕೈಗೊಳ್ಳಲಾಗಿದೆ.

442 ಆಶಾ,ಅಂಗನವಾಡಿ ಮತ್ತು ಆರೋಗ್ಯ ಇಲಾಖೆಯ ಕಾರ್ಯಕರ್ತರನ್ನು ಪೋಲಿಯೊ ವ್ಯಾಕ್ಸಿನ್ ಹಾಕಲು ನೇಮಿಸಲಾಗಿದೆ. 47 ಸೂಪರವೈಸರ್ ಗಳನ್ನು ಕೂಡ ನೇಮಿಸಲಾಗಿದೆ ತಾಲೂಕಿನ ಯಾವೊಂದು ಮಗು ಕೂಡ ಪೋಲಿಯೋ ಲಸಿಕೆಯಿಂದ ವಂಚಿವಾಗದಂತೆ ಅಗತ್ಯ ಸಿದ್ದೆತೆಗಳನ್ನು ಕೈಗೊಳ್ಳಲಾಗಿದೆ ಗ್ರಾಮೀಣ ಭಾಗದಲ್ಲಿನ ಜನರಿಗೆ ಜಾಗೃತಿ ಮೂಡಿಸುವುದಕ್ಕಾಗಿ ಶಿಕ್ಷಣ ಇಲಾಖೆಯ ಸಹಕಾರದಿಂದ ವಿದ್ಯಾರ್ಥಿಗಳಿಂದ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು. ಗ್ರೇಡ್2 ತಹಸೀಲ್ದಾರ ಅಬ್ದುಲ್ ವಾಹಿದ್ ಮಾತನಾಡಿ ಮಾನ್ವಿ ತಾಲೂಕಿನಾದ್ಯಂತ ನಡೆಯುವ ಪಲ್ಸ್ ಪೋಲಿಯೊ-2025 ಅಭಿಯಾನದ ಯಶಸ್ಸಿಗೆ ತಾಲೂಕಿನ ಎಲ್ಲಾ ಇಲಾಖೆಗಳ ಅಧಿಕಾರಿಗಳು ಆರೋಗ್ಯ ಇಲಾಖೆಗೆ ಅಗತ್ಯ ಸಹಕಾರ ನೀಡುವ ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸೋಣ ಪಟ್ಟಣದಲ್ಲಿ ಪುರಸಭೆ ಅಧಿಕಾರಿಗಳು, ಗ್ರಾಮೀಣ ಭಾಗದಲ್ಲಿ ಗ್ರಾಮ ಪಂಚಾಯಿತಿ ಅಧಿಕಾರಿಗಳು ಅಗತ್ಯ ಸಹಕಾರ ನೀಡುವ ಮೂಲಕ ತಾಲೂಕನ್ನು ಪೋಲಿಯೊ ಮುಕ್ತಗೊಳಿಸೋಣ ಎಂದು ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಮಲೇ-ರಿಯಾ ಅಧಿಕಾರಿ ಡಾ.ಚಂದ್ರಶೇಖರ ಸ್ವಾಮಿ ಮಾತನಾಡಿದರು.ಕ್ಷೇತ್ರ ಶಿಕ್ಷಣಾಧಿಕಾರಿ ಚಂದ್ರಶೇಖರ.ಡಿ, ಪುರಸಭೆ ಮುಖ್ಯಾಧಿಕಾರಿ ಪರಶುರಾಮ ದೇವಮಾನೆ , ತಾಲೂಕು ಪಂಚಾಯಿತಿ ಉ.ಖಾ.ಸಹಾಯಕನಿರ್ದೇಶಕರಾದ ದೀಪಾ ಅರಳಿ ಕಟ್ಟಿ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಭಾಗವಹಿಸಿದರು.

## ಇಂದಿನಿಂದ ಬಿ.ಗಣೇಕಲ್ ಶ್ರೀ ಮಾರುತೇಶ್ವರ ಜಾತ್ರಾ ಮಹೋತ್ಸವ



❑ ನೈಜ್ಯ ದೆಸೆ ನ್ಯೂಸ್

ಅರಕೇರಾ: ತಾಲೂಕಿನ ಬಿ.ಗಣೇಕಲ್ ಗ್ರಾಮದ ಭಕ್ತರ ಆರಾಧ್ಯ ದೈವ ಶ್ರೀ ಮಾರುತೇಶ್ವರ ಜಾತ್ರಾ ಮಹೋತ್ಸವ ಡಿ.19 ರಿಂದ ಡಿ. 24 ರವರೆಗೆ ಜರುಗಲಿದೆ. ಡಿ.19 ರಂದು ಬೆಳಿಗ್ಗೆ 05:30ಕ್ಕೆ ಅರ್ಚಕ-ರಿಂದ ವಿಶೇಷ ಪೂಜೆ, ರಾತ್ರಿ 8:30 ರಿಂದ ಪಲ್ಲಕ್ಕಿ ಮೆರವಣಿಗೆ ಜೊತೆಗೆ ಗಂಗಾಸ್ಥಳಕ್ಕೆ ಹೋಗುವ ಕಾರ್ಯಕ್ರಮ ನಂತರ 10:00 ರಿಂದ ಊರಗೌಡರ ಮನೆತನದಿಂದ ಜ್ಯೋತಿ



ಸೇವೆ ಮತ್ತು ಮುದುಕಣ್ಣ ತಾತನವರಿಂದ ಶ್ರೀ ಮಾರುತೇಶ್ವರ ಹೇಳಿಕೆ (ಕಾರ್ಣೀಕ) ಕಾರ್ಯಕ್ರಮ ಜರುಗಲಿದೆ. ಹೀಗೆ ಡಿ. 22 ರವರೆಗೆ ವತ್ತನದಾರರ ಮನೆತನದಿಂದ ಹಾಗೂ ವಿವಿಧ ಜನಾಂಗದ ಮನೆತನದಿಂದ ಜ್ಯೋತಿ ಸೇವೆ ಕಾರ್ಯಕ್ರಮ ಇರುತ್ತದೆ. ಡಿ.22 ರಂದು ಉಚ್ಚಾಯ ಉತ್ಸವ ಜರುಗಲಿದೆ.

ಡಿ.23 ರಂದು ಬೆಳಿಗ್ಗೆ 10:00 ರಿಂದ 3:00 ಗಂಟೆಯವರೆಗೆ ಸಮಸ್ತ ಜನಾಂಗದ ವತಿಯಿಂದ ದೈವಪೂಜೆ, ದೀರ್ಘದಂಡ ನಮಸ್ಕಾರ ಹಾಗೂ ಜ್ಯೋತಿ ಸೇವೆ ಕಾರ್ಯಕ್ರಮ ನಂತರ ರಾತ್ರಿ 9:30 ಕ್ಕೆ ಶ್ರೀ ಮಾರುತೇಶ್ವರ ಮಹಾರಥೋತ್ಸವ ಜರುಗಲಿದೆ. 10:00 ಕ್ಕೆ ಗ್ರಾಮದ ಕಲಾವಿದರಿಂದ ಬಯಲಾಟ ಪ್ರದರ್ಶನ ಇರುತ್ತದೆ. ಡಿ.24 ರಂದು ಮಧ್ಯಾಹ್ನ 2:00 ಗಂಟೆಗೆ ಹಾಲುಗಂಭ ಉತ್ಸವ ನಡೆಯಲಿದೆ ಈ ಉತ್ಸವದಲ್ಲಿ ವಿಜಯಶಾಲಿಯಾದವ-ರಿಗೆ ಬಹುಮಾನ ನೀಡಿ ಗೌರವಿಸಲಾಗುತ್ತದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ರೈಲು ಮಾರ್ಗದ ಅಂತಿಮ ಸ್ಥಳ ಸಮೀಕ್ಷೆಗೆ ಟೆಂಡರ್ ಸ್ವಾಗತಾರ್ಹ: ಮಹಾಂತೇಶ

❑ ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ಆಲಮಟ್ಟಿ-ಯಾದಗಿರಿ(162 ಕಿ.ಮೀ.) ರೈಲು ಮಾರ್ಗದ ಅಂತಿಮ ಸ್ಥಳ ಸಮೀಕ್ಷೆಗೆ ಟೆಂಡರ್ ಕರೆದಿರುವ ಕ್ರಮವನ್ನು ತಾಳಿಕೋಟಿ ರೈಲು ಮಾರ್ಗ ಹೋರಾಟ ಸಮಿತಿ ಸಂಚಾಲಕ ಮಹಾಂತೇಶ ಮುರಾಳ ಸ್ವಾಗತಿಸಿ ಕೇಂದ್ರ ಸರ್ಕಾರಕ್ಕೆ ಅಭಿನಂದಿಸಿದ್ದಾರೆ.

ಪತ್ರಿಕೆಯೊಂದಿಗೆ ಮಾತನಾಡಿದ ಅವರು ಈ ಭಾಗದ ಜನರ ಬಹು ದಿನಗಳ ಬೇಡಿಕೆಯಾದ ಆಲಮಟ್ಟಿ ಯಾದಗಿರಿ ರೈಲು ಮಾರ್ಗದ ಅಂತಿಮ ಸ್ಥಳ ಸಮೀಕ್ಷೆಗೆ ನೈರುತ್ಯ ರೈಲ್ವೆ ವಿಭಾಗವು ಟೆಂಡರ್ ಕರೆದಿರುವ ಕ್ರಮ ಅತ್ಯಂತ ಸಂತೋಷದ ವಿಷಯವಾಗಿದೆ. ನಮ್ಮ ಈ ಬೇಡಿಕೆಯನ್ನು ಕೇಂದ್ರ ರೈಲ್ವೆ ಸಚಿವರಾದ ಅಶ್ವಿನ್



ವೈಷ್ಣವ್ ಅವರಿಗೆ ತಲುಪಿಸಿ ಕಾರ್ಯರೂಪಕ್ಕೆ ತರುವಲ್ಲಿ ರೈಲ್ವೇ ರಾಜ್ಯ ಸಚಿವರಾದ ವಿ.ಸೋಮಣ್ಣ, ವಿಜಯಪುರ ಸಂಸದ ರಮೇಶ ಜಿಗಜಿಣಗಿ ಹಾಗೂ ರಾಯಚೂರ ಸಂಸದ ಬಿ.ವಿ. ನಾಯಕ ಅವರು ವಿಶೇಷ ಆಸಕ್ತಿ ವಹಿಸಿದ ಫಲವಾಗಿ ಇಂದು ಈ ಕಾರ್ಯ ಆರಂಭವಾಗಿದೆ.

ಅವರಿಗೆ ನಾನು ಹೋರಾಟ ಸಮಿತಿಗಳಿಂದ ಕೃತಜ್ಞತೆ ಸಲ್ಲಿಸುತ್ತೇನೆ ಎಂದಿರುವ ಅವರು ಆದಷ್ಟು ಬೇಗ ಸದರಿ ಕೆಲಸ ಮುಗಿಸಿ ನಮ್ಮ ಭಾಗದಲ್ಲೂ ರೈಲು ಓಡಾಟ ಆರಂಭಿಸಲು ಕೇಂದ್ರ ಸರ್ಕಾರ ನೆರವಾಗಬೇಕು, ಇದು ಆಲಮಟ್ಟಿ, ನಿಡಗುಂದಿ, ಮುದ್ದೇಬಿಹಾಳ,ತಾಳಿಕೋಟಿ ಹಾಗೂ ಹುಣಸಗಿ ರೈಲು ಮಾರ್ಗ ಹೋರಾಟ ಸಮಿತಿಗಳ ಪರಿಶ್ರಮ ಹಾಗೂ ಸಾರ್ವಜನಿಕರ ಸಹಕಾರಕ್ಕೆ ಸಿಕ್ಕ ಆರಂಭಿಕ ಯಶಸ್ಸು ಆಗಿದೆ ಎಂದು ಅವರು ತಿಳಿಸಿದ್ದಾರೆ.

## ಘನತ್ಯಾಜ್ಯ ವಿಲೇವಾರಿ ವಾಹನ ಚಾಲಕರನ್ನು ಖಾಯಂಗೊಳಿಸಿ: ಮೈತ್ರೇಯಿ ಕೃಷ್ಣನ್ ಆಗ್ರಹ!

❑ ನೈಜ್ಯ ದೆಸೆ ನ್ಯೂಸ್

ರಾಜ್ಯದ ಎಲ್ಲಾ ಘನತ್ಯಾಜ್ಯ ವಿಲೇವಾರಿ ಮಾಡುವ ವಾಹನ ಚಾಲಕರು, ಲೋಡರ್ಸ್ ಗಳು, ಕ್ಲೀನರ್ ಕಾರ್ಮಿಕರನ್ನು ಗುತ್ತಿಗೆ ಪದ್ಧತಿಯಿಂದ ವಿಮುಕ್ತಿಗೊಳಿಸಿ, ಖಾಯಂಗೊಳಿಸಬೇಕು ಹಾಗೂ ಈ ಕಾರ್ಮಿಕರಿಗೆ ಮಾಸಿಕ ವೇತನ 42 ಸಾವಿರ ನಿಗದಿಗೊಳಿಸಬೇಕು ಎಂದು ಎಐಸಿಸಿಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಮೈತ್ರೇಯಿ ಕೃಷ್ಣನ್ ಸರ್ಕಾರಕ್ಕೆ ಆಗ್ರಹಿಸಿದರು.

ಬೆಳಗಾವಿ ಸುವರ್ಣಸೌಧದ ಮುಂದೆ ಬುಧವಾರ ಪ್ರಗತಿಪರ ತ್ಯಾಜ್ಯ ಸಾಗಿಸುವ ವಾಹನ ಚಾಲಕರ ಮತ್ತು ಸಹಾಯಕರ ಸಂಘ (ಎಐಸಿಸಿಟಿಯು ಸಂಯೋಜಿತ) ವತಿಯಿಂದ ಬುಧವಾರ ಹಮ್ಮಿಕೊಂಡಿದ್ದ ಧರಣಿ ಸತ್ಯಾಗ್ರಹದಲ್ಲಿ ಅವರು ಮಾತನಾಡಿದರು. ರಾಜ್ಯದ ಮಹಾನಗರ ಪಾಲಿಕೆ, ನಗರಸಭೆ, ಪುರಸಭೆ, ಹಾಗೂ ಪಟ್ಟಣ ಪಂಚಾಯಿತಿಗಳಲ್ಲಿ ಕಳೆದ ಹಲವಾರು ವರ್ಷಗಳಿಂದ ಘನತ್ಯಾಜ್ಯ ವಿಲೇವಾರಿ ಮಾಡುವ ವಾಹನ ಚಾಲಕರು, ಲೋಡರ್ಸ್ ಗಳು



ಹಾಗೂ ಕ್ಲೀನರ್ ಕಾರ್ಮಿಕರು, ಯಾವುದೇ ಕೆಲಸದ ಭದ್ರತೆ ಇಲ್ಲದೇ ದುಡಿಯುತ್ತಿದ್ದಾರೆ.

ಸೇವಾನಿರತ ಸಾವಿರಾರು ಕಾರ್ಮಿಕ-ರಿಗೆ ಕನಿಷ್ಠ ಕೂಲಿಯಾಗಲಿ, ಸಂವಿಧಾನಬದ್ಧ ಕನಿಷ್ಠ ಸೌಕರ್ಯಗಳಾಗಲಿ ಇದುವರೆಗೂ ದೊರೆತಿಲ್ಲ. ಈ ಕೆಲಸದಿಂದ ಬರುವ ವೇತನವನ್ನೇ ನಂಬಿ ಜೀವನ ನಡೆಸುತ್ತಿರುವ ಈ ಕಾರ್ಮಿಕರು ಬೆಲೆ ಏರಿಕೆಯಿಂದಾಗಿ ದೈನಂದಿನ ಅವಶ್ಯಕತೆಗಳನ್ನು ಪಡೆದುಕೊಳ್ಳಲು ಆಗದೇ ಕುಟುಂಬವನ್ನು ನಿರ್ವಹಿಸಲು ಸಂಕಷ್ಟ ಎದುರಿಸುತ್ತಿದ್ದಾರೆ. ಇವರ ಸಂವಿಧಾನಾತ್ಮಕ ಹಕ್ಕುಗಳನ್ನು ಸರ್ಕಾರವೇ ಕಿತ್ತುಕೊಂಡು, ಈ ವೃತ್ತಿ ವಂಶಪಾರಂಪರ್ಯವಾಗಿ ಮುಂದುವರಿಯುವಂತ ನೋಡಿಕೊಳ್ಳುತ್ತಿದೆ. ಇದು ಖಂಡನಾರ್ಹವಾಗಿದ್ದು, ಸಂವಿಧಾನಬದ್ಧ ಹಕ್ಕುಗಳನ್ನು ಈ ಕಾರ್ಮಿಕ-ರಿಗೆ ನೀಡಬೇಕು ಎಂದು ಒತ್ತಾಯಿಸಿದರು.

ಎಐಸಿಸಿಟಿಯು ರಾಜ್ಯ ಘಟಕದ ಅಧ್ಯಕ್ಷ ಪಿ.ಪಿ.ಅಪ್ಪಣ್ಣ ಮಾತನಾಡಿ, ಘನ ತ್ಯಾಜ್ಯ ನಿರ್ವಹಣೆಯಲ್ಲಿ ಗುತ್ತಿಗೆ ಕಾರ್ಮಿಕ ಪದ್ಧತಿಯನ್ನು ರದ್ದುಗೊಳಿಸುವ ನಿಟ್ಟಿನಲ್ಲಿ 2016 ರಲ್ಲಿ ಕ್ಯಾಬಿನೆಟ್‌ನಲ್ಲಿ ನಿರ್ಧಾರ ತೆಗೆದುಕೊಂಡಿದೆ ಆದರೆ ಇದುವರೆಗೂ ಜಾರಿಗೆ ತಂದಿರುವುದಿಲ್ಲ.

ಸ್ವೀಪರ್‌ಗಳನ್ನು ನೇರ ಪಾವತಿಯ ಅಡಿಯಲ್ಲಿತಂದು ನಂತರಕ್ರಮ ಬದ್ಧಗೊಳಿಸಲಾಗಿದ್ದು, ಚಾಲಕರು, ಕ್ಲೀನರ್‌ಗಳು ಮತ್ತು ಲೋಡರ್‌ಗಳು ಸ್ವಚ್ಛತಾ ಕೆಲಸವನ್ನು ನಿರ್ವಹಿಸುತ್ತಿದ್ದಾಗ್ಯೂ, ಕೂಡ ಗುತ್ತಿಗೆ ಕಾರ್ಮಿಕ ವ್ಯವಸ್ಥೆಯ ಅಡಿಯಲ್ಲಿ ಅವರನ್ನು ಶೋಷಣೆ ಮಾಡಲಾಗುತ್ತಿದೆ. ಪೌರ ಕಾರ್ಮಿಕರನ್ನು ಖಾಯಂಗೊಳಿಸಿದ ಸಂದರ್ಭದ ಕಾರ್ಯಕ್ರಮವೊಂದಲ್ಲಿ ಸಿಎಂ ಸಿದ್ದರಾಮಯ್ಯ ಅವರು ಚಾಲಕರು, ಕ್ಲೀನರ್‌ಗಳು ಮತ್ತು ಲೋಡರ್‌ಗಳನ್ನು ನೇರಪಾವತಿಯಡಿ ತರುವ ಭರವಸೆ ನೀಡಿದ್ದರು. ಕಾಂಗ್ರೆಸ್ ತನ್ನ ಚುನಾವಣೆ ಪ್ರಣಾಳಿಕೆಯಲ್ಲಿಯೂ ಸಹ ಇದನ್ನು ಘೋಷಿಸಿದೆ. 2022ರಿಂದ ಭರವಸೆ ನೀಡುತ್ತಾ ಬರಲಾಗಿದ್ದರೂ, ಇಲ್ಲಿಯವರೆಗೂ ಈಡೇ-ರಿಸಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ರಾಜ್ಯ ಸಹ ಕಾರ್ಯದರ್ಶಿ ನಾಗರಾಜ ಪೂಜಾರ್ ಮಾತನಾಡಿ, ಘನತ್ಯಾಜ್ಯ ವಿಲೇವಾರಿ ಮಾಡುವ ವಾಹನ ಚಾಲಕರು, ಲೋಡರ್ಸ್ ಗಳು, ಕ್ಲೀನರ್‌ಗಳು, ದಿನ ನಿತ್ಯವೂ ಬೆವರು ಸುರಿಸಿ ಸ್ವಸ್ಥ ಸಮಾಜಕ್ಕಾಗಿ ದುಡಿಯುತ್ತಿದ್ದಾರೆ. ಕಾರ್ಮಿಕರ ಧ್ಯೇಯೋದ್ದೇಶವು ಖಾಯಂಂ-ಾತಿಯೆಡೆಗೆ ಇರುತ್ತದೆ. ಸರ್ಕಾರ ಘನತ್ಯಾಜ್ಯ ವಿಲೇವಾರಿ ಮಾಡುವ ವಾಹನ ಚಾಲಕರು, ಲೋಡರ್ಸ್ ಗಳು, ಕ್ಲೀನರ್ ಕಾರ್ಮಿಕರ ವಿವಿಧ ಹಕ್ಕೊತ್ತಾಯಗಳನ್ನು ಈಡೇರಿಸುವ ಮೂಲಕ ಅವರು ಘನತೆಯುಕ್ತ ಬದುಕನ್ನು ನಡೆಸಲು ಅನುಕೂಲ ಮಾಡಿಕೊಡಬೇಕು. ಇಲ್ಲದೇ ಹೋದಲ್ಲಿ ಮುಂಬರುವ ದಿನಗಳಲ್ಲಿ ರಾಜ್ಯದಾದ್ಯಂತ ಉಗ್ರ ಹೋರಾಟ ಹಮ್ಮಿಕೊಳ್ಳುವುದು ಅನಿವಾರ್ಯವಾಗುತ್ತದೆ ಎಂದು ಎಚ್ಚರಿಸಿದರು. ಈ ಸಂದರ್ಭದಲ್ಲಿ: ಮುಖಂಡರಾದ ನಿರ್ಮಲಾ, ವಿಜಯ್ ದೊರೆರಾಜು, ರಾಮಣ್ಣ ವಿಟ್ಲ, ಕೇಶವ ನಾಯಕ್, ಅಶೋಕ್‌ಗೌಡ, ಚಂದ್ರಶೇಖರ್ ಶಿರಗುಪ್ಪಿ, ನಾಗಲಕ್ಷ್ಮಿ, ಅಜೀಜ್ ಜಾಗೀದಾರ್, ಪರಶುರಾಮ, ವೀರೇಶ, ಮಾಯಮ್ಮ ಹಾಗೂ ನೂರಾರು ಸಂಖ್ಯೆಯಲ್ಲಿ ಕಾರ್ಮಿಕರು ಹೋರಾಟದಲ್ಲಿ ಪಾಲ್ಗೊಂಡಿದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಎಂಡಿ (ಯುನಾನಿ) ಅಮ್ರೇಜ್ ಜಿಲ್ಡ್ ವಾ ತಜೈನಿಯತ್ (ಸ್ಕಿನ್ & ಕಾಸ್ಮೆಟಾಲಜಿ)

ಅಮ್ರಾಜೆ ಜಿಲ್ಡ್ ವಾ ತಜ್ಯೇನಿಯಾತ್ (ಚರ್ಮ ಮತ್ತು ಕಾಸ್ಮೆಟಾಲಜಿ **MD (Unani) in Amraze Jild wa Tazyeeniyat (Skin & Cosmetology))** ನಲ್ಲಿ ಪಿಜಿ ಯುನಾನಿ ವೈದ್ಯಕೀಯದಲ್ಲಿ ಚರ್ಮ ರೋಗಗಳು ಮತ್ತು ಕಾಸ್ಮೆಟಾಲಜಿಯ ಮೇಲೆ ಕೇಂದ್ರೀಕರಿಸುವ ಸ್ನಾತಕೋತ್ತರ ಕೋರ್ಸ್ ಆಗಿದೆ. ಇದು ಸಾಂಪ್ರದಾಯಿಕ ಯುನಾನಿ ವೈದ್ಯಕೀಯ ವ್ಯವಸ್ಥೆಯೊಳಗೆ ಚರ್ಮರೋಗ ಮತ್ತು ಕಾಸ್ಮೆಟಾಲಜಿಯ ವಿಶೇಷತೆಗೆ ಸೇರಿದೆ. ಕೋರ್ಸ್ ಸಾಮಾನ್ಯವಾಗಿ 2–3 ವರ್ಷಗಳವರೆಗೆ ಇರುತ್ತದೆ. ಚರ್ಮರೋಗ ಮತ್ತು ಸೌಂದರ್ಯಶಾಸ್ತ್ರಕ್ಕೆ ಸಾಂಪ್ರದಾಯಿಕ ಮತ್ತು ಆಧುನಿಕ ವಿಧಾನಗಳನ್ನು ಸಂಯೋಜಿಸುವ ಮೂಲಕ ವಿದ್ಯಾರ್ಥಿಗಳು ಗಿಡಮೂಲಿಕೆ ಚಿಕಿತ್ಸೆಗಳು, ನೈಸರ್ಗಿಕ ಚಿಕಿತ್ಸೆಗಳು ಮತ್ತು ಸೌಂದರ್ಯವರ್ಧಕ ವಿಧಾನಗಳ ಬಗ್ಗೆ ಕಲಿಯುತ್ತಾರೆ. ಅಮ್ರಾರ್ಝ್ ಜಿಲ್ದ್ ವ ತಝೀನಿಯಾತ್ ಯುನಾನಿ ವೈದ್ಯಕೀಯದ ಚರ್ಮರೋಗಗಳು, ಕೂದಲು ಸಮಸ್ಯೆಗಳು ಹಾಗೂ ಸೌಂದರ್ಯ ಚಿಕಿತ್ಸೆಗಳ ಮೇಲೆ ಕೇಂದ್ರೀಕರಿಸಿದ ವಿಶೇಷ ಪೋಸ್ಟ್‌ಗ್ರಾಜುಯೇಟ್ ಕೋರ್ಸ್. ಚರ್ಮ ಮತ್ತು ಕೂದಲಿನ ರೋಗಗಳು , ಯುನಾನಿ ಮತ್ತು ಆಧುನಿಕ ಡರ್ಮಟಾಲಜಿ, ನ್ಯಾಚುರಲ್ & ಹರ್ಬಲ್ ಕಾಸ್ಮೆಟಾಲಜಿ, ಸೌಂದರ್ಯ ಚಿಕಿತ್ಸೆಗಳು ಕಲಿಸಲಾಗುತ್ತದೆ. ಪ್ರವೇಶ ಪ್ರಕ್ರಿಯೆ oIAPGET (PG AYUSH Entrance Exam) Merit-based counseling, ಸರ್ಕಾರಿ ಮತ್ತು ಖಾಸಗಿ ಯುನಾನಿ ಕಾಲೇಜುಗಳು ಚರ್ಮ ಪರೀಕ್ಷೆ ಮತ್ತು ರೋಗ ನಿರ್ಣಯ , ಹರ್ಬಲ್ ಲೇಪಗಳು, ಲೋಷನ್ ತಯಾರಿ, ಊರಿಚಿಟಚಿ (ಚರ್ಮಕ್ಕೆ ಸಂಬಂಧಿಸಿದ ಉಪಯೋಗ), ಪೇಷಂಟ್ ಕೌನ್ಸೆಲಿಂಗ್ ಅಮ್ರಾರ್ಝ್ ಜಿಲ್ದ್ ವ ತಝೀನಿಯಾತ್ ವಿಭಾಗ, ಡರ್ಮಟಾಲಜಿ ಮತ್ತು ಕಾಸ್ಮೆಟಾಲಜಿ ವಿಭಾಗವಾಗಿ ಪರಿಚಿತವಾಗಿದೆ, ಶೈಕ್ಷಣಿಕ ವರ್ಷ 2018–19ರಲ್ಲಿ ಸ್ಥಾಪಿಸಲ್ಪಟ್ಟಿದ್ದು, ಭಾರತದಲ್ಲಿ ಯುನಾನಿ ಡರ್ಮಟಾಲಜಿ ಮತ್ತು ಕಾಸ್ಮೆಟಾಲಜಿಯಲ್ಲಿ ಮೊತ್ತಮೊದಲ MD (Unani) ಕೋರ್ಸ್ ನೀಡುವ ಸಂಸ್ಥೆ ಆಗಿದೆ. ?ಚರ್ಮ, ಕೂದಲು ಮತ್ತು ನಖಗಳ ಆರೋಗ್ಯ ಮತ್ತು ಸೌಂದರ್ಯಕ್ಕೆ ಗುಣಮಟ್ಟದ ಶಿಕ್ಷಣ ಮತ್ತು ಸಮಗ್ರ ಆರೈಕೆಯನ್ನು ಒದಗಿಸುವುದು ಯುನಾನಿ ವೈದ್ಯಕೀಯದ ಸಂಪೂರ್ಣ ತತ್ತ್ವಗಳಲ್ಲಿ (holistic principles) ಆಧಾರಿತ ಚಿಕಿತ್ಸೆ, ಅಖ್ಲಾತ್ (humours) ಸಮತೋಲನವನ್ನು ಮೆಚ್ಚಿ, ಚರ್ಮದ ಸಮಸ್ಯೆಗಳ ಮೂಲ ಕಾರಣಗಳನ್ನು ಅರ್ಥಮಾಡಿಕೊಳ್ಳುವುದು, ಚರ್ಮ ಮತ್ತು ಸೌಂದರ್ಯ ಸಂಬಂಧಿತ ಸಮಸ್ಯೆಗಳಿಗೆ ವಿಸ್ತೃತ ಚಿಕಿತ್ಸಾ ಪರಿಕಲ್ಪನೆಗಳನ್ನು ಒದಗಿಸುವುದು ಚರ್ಮ, ಕೂದಲು ಮತ್ತು ಉಗುರು ಕಾಯಿಲೆಗಳಿಂದ ಹಿಡಿದು ಲೈಂಗಿಕವಾಗಿ ಹರಡುವ ಸೋಂಕುಗಳವರೆಗೆ ವ್ಯಾಪಕ ಶ್ರೇಣಿಯ ಸಮಸ್ಯೆಗಳನ್ನು ಒಳಗೊಂಡ ವ್ಯಾಪಕವಾದ ಕ್ಲಿನಿಕಲ್ ಆರೈಕೆಯನ್ನು ಒದಗಿಸುವುದರ ಮೇಲೆ ಈ ವಿಭಾಗದ ಪ್ರಮುಖ ಗಮನ ಕೇಂದ್ರೀಕರಿಸಲಾಗಿದೆ. ಅಸಾಧಾರಣ ವೈದ್ಯಕೀಯ ಮತ್ತು ಸೌಂದರ್ಯ ಚಿಕಿತ್ಸೆಗಳನ್ನು ನೀಡಲು ಮೀಸಲಾಗಿರುವ ಹೆಚ್ಚು ನುರಿತ ಚರ್ಮರೋಗ ತಜ್ಞರು ಮತ್ತು ಕಾಸ್ಮೆಟಾಲಜಿಸ್ಟ್‌ಗಳ ತಂಡವನ್ನು ವಿಭಾಗ ಹೊಂದಿದೆ. ಸುಧಾರಿತ ರೋಗನಿರ್ಣಯ ತಂತ್ರಗಳನ್ನು ಬಳಸುವುದು ಮತ್ತು ಇತ್ತೀಚಿನ ವೈದ್ಯಕೀಯ ಸಂಶೋಧನೆಯೊಂದಿಗೆ ನವೀಕೃತವಾಗಿರುವುದು, ನಿಖರವಾದ ರೋಗನಿರ್ಣಯಗಳು ಮತ್ತು ವೈಯಕ್ತಿಕಗೊಳಿಸಿದ ಚಿಕಿತ್ಸಾ ಯೋಜನೆಗಳನ್ನು, ಚರ್ಮದ ಆರೋಗ್ಯವನ್ನು ಸುಧಾರಿಸಲು, ಅಸ್ವಸ್ಥತೆಯನ್ನು ನಿವಾರಿಸಲು ಮತ್ತು ಜೀವನದ ಗುಣಮಟ್ಟವನ್ನು ಹೆಚ್ಚಿಸಲು ನೀಡಲಾಗುತ್ತದೆ.

## ತಿರುಪತಿ–ಪ್ರಯಾಗರಾಜ ವಿಶೇಷ ರೈಲು: ಡಾ.ಬಾಬುರಾವ್

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು: ತಿರುಪತಿಯಿಂದ ಪ್ರಯಾಗ ರಾಜ್ ಗೆ ಏಕಮುಖ ವಿಶೇಷ ರೈಲು ಒಂದು ದಿನ ಓಡಲಿದೆ ಎಂದು ರೈಲ್ವೆ ಸಲಹಾ ಸಮಿತಿ ಮಾಜಿ ಸದಸ್ಯ ಡಾ.ಬಾಬುರಾವ್ ತಿಳಿಸಿದ್ದಾರೆ.**



ವಿಶೇಷ ರೈಲು (ಸಂಖ್ಯೆ 07298) ಒಂದುದಿನದ ಒಂದೇ ಮಾರ್ಗದ ವಿಶೇಷ ಸೇವೆ ಒದಗಿಸಲಿದ್ದು ಡಿ.20 ರಂದು ಬೆಳಿಗ್ಗೆ 8.15 ಕ್ಕೆ ತಿರುಪತಿಯಿಂದ ಹೊರಡುವ ಈ ರೈಲ್ವೆ ರೇಣಿಗುಂಟಾ, ರಾಜಮ್ ಪೇಟ್, ಕಡಪ, ಯರಗುಂಟಾ, ಗೂಟಿ, ಗುಂತಕಲ್, ಮಂತ್ರಾಲಯಂ ರಸ್ತೆ, ರಾಯಚೂರು, ಕೃಷ್ಣಾ, ಯಾದಗಿರಿ, ವಿಕರಬಾದ್, ಲಿಂಗಂಪಲ್ಲ, ಸಿಕಂದರ್ ಬಾದ್, ಕಾಝೀ ಪೇಟೆ, ಪೆದ್ದಪಲ್ಲಿ, ಮಂಚಿರಿಯಾಳ, ಸಿರಪುರ ಕಾಗಜನಗರ, ಚಂದ್ರಪುರ, ನಾಗಪುರ, ಬೆತುಲ್, ಇಟರಸಿ, ಭೋಪಾಲ, ಬಿನಾ, ಝಾನ್ಸಿ, ಓರಿಯಾ, ಗೋವಿಂದಪುರಿ ಮಾರ್ಗವಾಗಿ ಬೆಳಿಗ್ಗೆ 4.30 ಕ್ಕೆ ಪ್ರಯಾಗರಾಜ್ ತಲುಪಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಸಾರ್ವಜನಿಕರು ಇದರ ಪ್ರಯೋಜ ಪಡೆಯಬೇಕೆಂದು ಅವರು ಕೋರಿದ್ದಾರೆ.

# ಪ್ರಧಾನ ಮಂತ್ರಿ ಸುರಕ್ಷಿತ ಮಾತೃತ್ವ ಅಭಿಯಾನ ಖಾಸಗಿ ವೈದ್ಯರ ಕೈಜೊಡಿಸುವಿಕೆಯಿಂದ ಗರ್ಭಿಣಿಯರ ಆರೋಗ್ಯ ಸುರಕ್ಷತೆಗೆ ಸಹಕಾರಿ: ಡಾ ಸುರೇಂದ್ರಬಾಬು.

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು: ಡಿ18–ಗರ್ಭಿಣಿಯೆಂದು ತಿಳಿದ ದಿನದಿಂದ ವೈದ್ಯರ ಮೂಲಕ ತಪಾಸಣೆ, ಸಲಹೆ ಸೂಚನೆಗಳ ಅನುಸರಿಸುವಿಕೆಯಿಂದ ಹೆರಿಗೆ ಸಮಯದಲ್ಲಿ ಉದ್ಭವಿಸುವ ಗಂಡಾಂತರಕಾರಿ ಅಂಶಗಳನ್ನು ನಿರ್ವಹಿಸಲು ಸರ್ಕಾರಿ ವೈದ್ಯರೊಂದಿಗೆ ಖಾಸಗಿ ಆಸ್ಪತ್ರೆಗಳ ವೈದ್ಯರು ಸಹ ಪ್ರತಿ ತಿಂಗಳು 9 ತಾರೀಖಿನಂದು ತಪಾಸಣೆಯನ್ನು ತಮ್ಮ ಆಸ್ಪತ್ರೆಗಳಲ್ಲಿ ಉಚಿತವಾಗಿ ಅಥವಾ ಹತ್ತಿರ ಸರಕಾರಿ ಆಸ್ಪತ್ರೆಗಳಿಗೆ ಆಗಮಿಸಿ ಕೈಗೊಳ್ಳಲು ಮುಂದೆ ಬನ್ನಿ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ ಸುರೇಂದ್ರ ಬಾಬು ಕೊರಿದರು.**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಮೂಲಕ ಕೃಷ್ಣ ಸಭಾಂಗಣದಲ್ಲಿ ಸರಕಾರಿ ಹಾಗೂ ಖಾಸಗಿ ಆಸ್ಪತ್ರೆಗಳ ವೈದ್ಯರಿಗೆ ಹಮ್ಮಿಕೊಂಡ ತರಬೇತಿಯಲ್ಲಿ ಮಾತನಾಡುತ್ತಾ, ಗರ್ಭಾವಸ್ಥೆಯ ಅವಧಿಯಲ್ಲಿ ರಕ್ತದಲ್ಲಿ



ಕಬ್ಬಿಣಾಂಶ ಹೆಚ್ಚಿಸುವ, ಗರ್ಭದಲ್ಲಿ ಭ್ರೂಣದ ಸರಿಯಾದ ಬೆಳವಣಿಗೆಗೆ ಸಹಕಾರಿಯಾಗಿ ಸುರಕ್ಷಿತ ಹೆರಿಗೆಗೆ ಸಹಾಯಕವಾಗುವ ಆರೋಗ್ಯ ಇಲಾಖೆಯಿಂದ ಉಚಿತವಾಗಿ ನೀಡಲ್ಪಡುವ ಕಬ್ಬಿಣಾಂಶ ಮಾತ್ರೆಗಳನ್ನು ಪ್ರತಿದಿನ ಒಂದರಂತೆ ಕನಿಷ್ಠ 180 ಸೇವಿಸಲು, ಕಬ್ಬಿಣಾಂಶ ಮಾತ್ರೆ ನುಂಗಿದರೆ, ಭ್ರೂಣ ದಪ್ಪವಾಗುತ್ತದೆ, ಕಪ್ಪು ಬಣ್ಣದ ಮಗು ಹುಟ್ಟುತ್ತದೆ ಎಂಬ ತಪ್ಪು ನಂಬಿಕೆಗಳನ್ನು, ಗಾಳಿಸುದ್ದಿಗಳನ್ನು ನಂಬದಂತೆ, ಅಲ್ಲದೆ ತೀವ್ರ ರಕ್ತಹೀನತೆಯಂತಹ ಸನ್ನಿವೇಶದಲ್ಲಿ ಸ್ಥಳೀಯವಾಗಿ ನೀಡುವ ಚಿಕಿತ್ಸೆಯಾದ (ಐಎಫ್‌ಎ ಮಾತ್ರೆ, ಐರನ್ ಸುಕ್ರೋಸ್, ರಕ್ತ ಹಾಕಿಸುವಿಕೆ) ಸುಧಾರಣೆಯಾಗದಿದ್ದಲ್ಲಿ ತಜ್ಞರ ಬಳಿ ತಪ್ಪದೆ ಬರಬೇಕು ಎಂದು ಸಲಹೆ ನೀಡಲು ಖಾಸಗಿ ಕ್ಷೇತ್ರದ ವೈದ್ಯರು ಮುಂದೆ ಬರಲು ವಿನಂತಿಸಿದರು. ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ ನಂದಿತಾ ಎಮ್ ಎನ್ ಮಾತನಾಡಿ ಗಂಡಾಂತರ ಗರ್ಭಿಣಿಯರು ಎಂದು ಗುರ್ತಿಸಿದ ನಂತರ ಅಂದರೆ ಚೊಚ್ಚಲು ಗರ್ಭಿಣಿ, ಎತ್ತರ ಕಡಿಮೆ, ಅಧಿಕ ರಕ್ತದೊತ್ತಡ, ರಕ್ತದಲ್ಲಿ ಕಬ್ಬಿಣಾಂಶ ಕೊರತೆ, ಅವಳಿಜವಳಿ ಗರ್ಭಣಿ, ವಿವಾಹವಾಗಿ ಐದಕ್ಕಿಂತ ಹೆಚ್ಚು ವರ್ಷಗಳ ನಂತರ ಗರ್ಭಿಣಿಯಾಗಿರುವುದು, ಮೊದಲ ಹೆರಿಗೆ ಸಿಸೇರಿಯನ್, ಮುಂತಾದ ಕಾರಣಗಳಿದ್ದರೆ ದಯವಿಟ್ಟು ನಿರ್ಲಕ್ಷಿಸಿದಂತೆ ಹಾಗೂ ಅಗತ್ಯವಿದ್ದಲ್ಲಿ ಸ್ಕ್ಯಾನ್ ಮಾಡಿಸಲು, ಮೊದಲ ಹೆರಿಗೆ ಶಸ್ತ್ರಚಿಕಿತ್ಸೆ ಮೂಲಕವಾದಲ್ಲಿ ಪುನಃ ಗರ್ಭಿಣಿಯಾಗುವ ಅವಧಿಯನ್ನು ಕನಿಷ್ಠ 3 ವರ್ಷಕ್ಕೆ ಕಡ್ಡಾಯವಾಗಿ ಮುಂದುಡುವುದು, ಇದಕ್ಕಾಗಿ ಅಂತರ ಚುಚ್ಚುಮದ್ದು, ಕಾಪರ–ಟಿ, ನೀರೊಧ ಬಳಸಲು ತಮ್ಮ ಬಳಿ ಬರುವ ದಂಪತಿಗಳಿಗೆ ಜಾಗೃತಿ ನೀಡಲು ಕೋರಿದರು.

ಈ ಸಂದರ್ಭದಲ್ಲಿ ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ ಗಣೇಶ್ ಕೆ, ತಾಲೂಕಾ ಆರೋಗ್ಯಾಧಿಕಾರಿ ಡಾ ಪ್ರಜ್ವಲ್‌ಕುಮಾರ್, ತಜ್ಞ ವೈದ್ಯರಾದ ಡಾ ಅರುಣ್‌ಕುಮಾರ್, ಡಾ ಸಂ–ಜಯ ಶೆಟ್ಟಿ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಡಿವೈಹೆಚ್‌ಇಓ ಬಸಯ್ಯ, ಡಿಪಿಎಮ್ ನವೀನ್‌ಕುಮಾರ್, ಎಮ್‌ಎನ್‌ಡಿ ಗುರು ಗಂಪ್ಪಾ, ಸೇರಿದಂತೆ ಸರಕಾರಿ ಹಾಗೂ ಖಾಸಗಿ ಆಸ್ಪತ್ರೆ ವೈದ್ಯರು, ಐಎಮ್‌ಎ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘದ ತಾಲೂಕು ಘಟಕದ ನೂತನ ಪದಾಧಿಕಾರಿಗಳ ಅಯ್ಕೆ



❑ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ಪತ್ರಿಕಾ ಭವನದಲ್ಲಿ ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘದ ತಾಲೂಕು ಘಟಕದ ನೂತನ ಪದಾಧಿಕಾರಿಗಳ ಅಯ್ಕೆ ಸಭೆಯಲ್ಲಿ ಕ.ಕಾ.ನಿ.ಪ.ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷರಾದ ಆರ್.ಗುರುನಾಥ ಮಾತನಾಡಿ ಸಮಾಜದಲ್ಲಿ ವಿದ್ಯಾಮಾನಗಳನ್ನು ಜನರಿಗೆ ತಿಳಿಸುವ ಸಂವಿಧಾನದ ನಾಲ್ಕನೆ ಅಂಗವೆಂದೆ ಪರಿಗಣಿಸಲಾಗಿರುವ ಪತ್ರಿಕಾ ರಂಗದಲ್ಲಿ ಸೇವೆ ಸಲ್ಲಿಸುತ್ತಿರುವ ಪತ್ರಕರ್ತರ ಕ್ಷೇಮಾಭಿವೃದ್ದಿಗಾಗಿ ಪತ್ರಕರ್ತರನ್ನು ಸಂಘಟಿಸುವ ಕಾರ್ಯವನ್ನು ಸಂಘವು ಮಾಡುತ್ತಿದೆ ಈ ಬಾರಿಯಿಂದ ರಾಜ್ಯ ಘಟಕವು ತಾಲೂಕು ಘಟಕಗಳಿಗೆ ಪ್ರತ್ಯಕವಾದ ಸ್ಥಾನಮಾನವನ್ನು ನೀಡಿ ಗುರುತಿಸಿರುವುದರಿಂದ ತಾಲೂಕಿನ ಪರ್ತಕರ್ತರ ಶ್ರೇಯಸ್ಸಿಗಾಗಿ ತಾಲೂಕು ಘಟಕಕ್ಕೆ ನೂತನ ಪದಾಧಿಕಾರಿಗಳನ್ನು 3 ವರ್ಷದ ಅವಧಿಗಾಗಿ ಸದಸ್ಯರು ಆಯ್ಕೆ ಮಾಡಿಕೊಳ್ಳಲಿದ್ದಾರೆ ಜಿಲ್ಲಾ ಘಟಕವು ಅತ್ಯಂತ ಶಿಸ್ತು ಬದ್ದವಾಗಿ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಸಂಘದ ಸದಸ್ಯರ ಒಮ್ಮತದ ಆಯ್ಕೆಯಂತೆ ತಾಲೂಕು ಘಟಕಗಳಿಗೆ ಪದಾಧಿಕಾರಿಗಳನ್ನು ಯಶಸ್ವಿಯಾಗಿ ಆಯ್ಕೆಮಾಡಲಾಗಿದೆ ಎಂದು ತಿಳಿಸಿದರು.**

ನಂತರ ನಡೆದ ತಾಲೂಕು ಘಟಕದ ಪದಾಧಿಕಾರಿಗಳ ಚುನಾವಣೆಯಲ್ಲಿ ನೂತನ ತಾ. ಅಧ್ಯಕ್ಷರಾಗಿ ಅಶೋಕ ತಡಕಲ್, ಪ್ರಧಾನ ಕಾರ್ಯದರ್ಶಿಯಾಗಿ ರವಿಕುಮಾರ್ , ಉಪಾಧ್ಯಕ್ಷರಾಗಿ ದೇವಪ್ಪ ಬ್ಯಾಗವಾಟ್, ಗೂಳಪ್ಪ ನೀರಮಾನ್ವಿ, ಕಾರ್ಯದರ್ಶಿಯಾಗಿ ಅಜಯಕುಮಾರ್, ಖಜಾಂಚಿಯಾಗಿ ವಿಜಯಕುಮಾರ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಪಿ.ಪರಮೇಶ , ಕೃಷ್ಣಮೂರ್ತಿ ಗುಡಿ ,ಮಾರೆಪ್ಪ ದೊಡ್ಡಮನಿ, ಚಂದ್ರಶೇಖರ ಮದ್ಲಾಪೂರು, ಈಶಪ್ಪ ಬೈಲ್ ಮರ್ಚೇಡ್, ಆನಂದಸ್ವಾಮಿ ಹಿರೇಮಠ ನಕ್ಕುಂದಿ, ಶಿವಕುಮಾರ್ ಜಗ್ಲಿ ಆಯ್ಕೆಯಾದರು.

ನೂತನ ಪದಾಧಿಕಾರಿಗಳಿಗೆ ಪ್ರಮಾಣ ಪತ್ರ ವಿತರಿಸಿ ಅಭಿನಂದಿಸಲಾಯಿತು. ಕ.ಕಾ.ನಿ.ಪ.ಪತ್ರಕರ್ತರ ಸಂಘದ ಜಿಲ್ಲಾ ಪ್ರ. ಕಾರ್ಯದರ್ಶಿ ಸಿದ್ದಯ್ಯ ಸ್ವಾಮಿ ಕುಕನೂರು, ಜಿಲ್ಲಾ ಉಪಾಧ್ಯಕ್ಷರಾದ ಮಹಾನಂದ ನಾಯಕ, ಸೂಗುರೇಶ ಎಸ್. ಗುಡಿ, ಜಿಲ್ಲಾ ಕಾರ್ಯದರ್ಶಿ ಬಸವರಾಜ ಬೋಗಾವತಿ, ಜಿಲ್ಲಾ ಖಜಾಂಚಿ ಮಲ್ಲಿಕಾರ್ಜುನಯ್ಯ, ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರಾದ ಲಕ್ಷ್ಮಿ ಪ್ರಸನ್ನ ಜೈನ್ , ಲಕ್ಷ್ಮಣ ಕಪಗಲ್, ತಾಯಪ್ಪ ಬಿ.ಹೊಸೂರು ಹಾಗೂ ಮಾನ್ವಿ ತಾಲೂಕು ಘಟಕದ ಸದಸ್ಯರು ಇದ್ದರು.

# ಶ್ರೀ ವಾಸವಿ ಮಹಿಳಾ ಸಂಘದ ವತಿಯಿಂದ ವರಹ ಶ್ರೀದೇವಿ ಸಾಮೂಹಿಕ ಪೂಜಾ ಕಾರ್ಯಕ್ರಮ

❑ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ಶ್ರೀ ನಗರೇಶ್ವರ ದೇವಸ್ಥಾನದ ಆವರಣದಲ್ಲಿನ ಶ್ರೀ ವಾಸವಿ ಕಲ್ಯಾಣ ಮಂಟಪದಲ್ಲಿ ಶ್ರೀ ವಾಸವಿ ಮಹಿಳಾ ಸಂಘದ ವತಿಯಿಂದ ನಡೆದ ವರಹ ಶ್ರೀದೇವಿ ಸಾಮೂಹಿಕ ಪೂಜಾ ಕಾರ್ಯಕ್ರಮದಲ್ಲಿ ಶ್ರೀ ನಗರೇಶ್ವರ ದೇವಸ್ಥಾನದ ಪ್ರಧಾನ ಅರ್ಚಕರಾದ ದ್ವಾರಕನಾಥ ಭಟ್ ಉಪನ್ಯಾಸ ನೀಡಿ ಶ್ರೀ ಭಗವಾನ್ ಶ್ರೀ ವಿಷ್ಣುವಿನ ದಶವತಾರಗಳಲ್ಲಿ ಒಂದಾದ ವರಹ ಅವತಾರದಲ್ಲಿ ಭಗವಂತನನ್ನು ಶ್ರೀದೇವಿಯ ಜೋತೆಗೆ ಸುಮಂಗಲಿಯರು ಪೂಜಿಸುವುದರಿಂದ ಉತ್ತಮ ಫಲಗಳು ದೊರೆಯುತ್ತವೆ ಎಂದು ತಿಳಿಸಿದರು.**



ನೂರಾರು ಮಹಿಳೆಯರು ಸಾಮೂಹಿಕವಾಗಿ ಭಕ್ತಿ ಶ್ರದ್ದೆಗಳಿಂದ ಪೂಜಿಸಿದರು. ವರಹ ಶ್ರೀದೇವಿ ಮೂರ್ತಿಗಳಿಗೆ ವಿಶೇಷ ಅಲಂಕಾರ ಮಾಡಿ ಪೂಜೆ ಸಲ್ಲಿಸಲಾಯಿತು. ಕಾರ್ಯಕ್ರಮದಲ್ಲಿ ಶ್ರೀ ನಗರೇಶ್ವರ ಆರ್ಯವೈಶ್ಯ ಸಂಘದ ತಾಲೂಕು ಅಧ್ಯಕ್ಷರಾದ ಆರ್ ಮುತ್ತುರಾಜ್ ಶೆಟ್ಟಿ, ಬಿ,ಈರಣ್ಣ ಶೆಟ್ಟಿ ,ನಯೋಪ್ರ ಸದಸ್ಯರಾದ ಎಂ. ಯಂಕಯ್ಯಶೆಟ್ಟಿ , ಸತ್ಯನಾರಾಯಣ ಶೆಟ್ಟಿ. ಈ.ರಾಮಾಂಜನೇಯ್ಯ ಶೆಟ್ಟಿ, ವಾಸವಿ ಯುವಜನ ಸಂಘದ ಅಧ್ಯಕ್ಷರಾದ ಇ.ಬಸವರಾಜ ಶೆಟ್ಟಿ , ಶ್ರೀ ವಾಸವಿ ಮಹಿಳಾ ಸಂಘದ ತಾ.ಅಧ್ಯಕ್ಷರಾದ ಶ್ರೀ ಲಕ್ಷಿ ?ಮೇ ರಾಮಾಂಜನೇಯ್ಯಶೆಟ್ಟಿ,ಬಿ,ರಾಧ ರಾಘವೇಂದ್ರ ಶೆಟ್ಟಿ ಕಾರ್ಯದರ್ಶಿ,– ಎಂ. ಶೋಭ ಯಂಕಯ್ಯ ಶೆಟ್ಟಿ ಸೇರಿದಂತೆ ನೂರಾರು ಮಹಿಳೆಯರು ಭಾಗವಹಿಸಿದರು.

# ನಿರುದ್ಯೋಗಿ ಮಹಿಳೆಯರಿಗೆ ಆರ್ಥಿಕ ನೆರವಿಗೆ ಅರ್ಜಿ ಆಹ್ವಾನ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು: ಡಿಸೆಂಬರ್ 18 (ಕರ್ನಾಟಕ ವಾರ್ತೆ): ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ 2025–26ನೇ ಸಾಲಿನಲ್ಲಿ ನಿರುದ್ಯೋಗಿ ಮಹಿಳೆಯ–ರಿಗೆ ಹಾಗೂ ಲಿಂಗತ್ವ ಅಲ್ಪಸಂಖ್ಯಾತರ ಪುನರ್ವಸತಿ ಯೋಜನೆಗಳಲ್ಲಿ ಆರ್ಥಿಕ ನೆರವನ್ನು ನೀಡಲಾಗುತ್ತಿದ್ದು, ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.**

ಉದ್ಯೋಗಿನಿ ಯೋಜನೆಯಡಿ 18–55 ವಯೋಮಿತಿಯೊಳಗಿರುವ ಆರ್ಥಿಕವಾಗಿ ಹಿಂದುಳಿದ ಮತ್ತು ಸಾಮಾನ್ಯ ಮಹಿಳೆಯರು ಯಾವುದಾದರೂ ಲಾಭದಾಯಕ ಚಟುವಟಿಕೆಯಲ್ಲಿ ಸ್ವಂತ ಉದ್ಯೋಗವನ್ನು ಕೈಗೊಳ್ಳಲು ಬ್ಯಾಂಕಿನಿಂದ ಗರಿಷ್ಠ 3 ಲಕ್ಷ ರೂ.ಗಳವರೆಗೆ ಸಾಲ ಹಾಗೂ ಸಾಮಾನ್ಯ ವರ್ಗದ ಮಹಿಳೆಯ–ರಿಗೆ, ವಿಧವೆ, ಅಂಗವಿಕಲರು ಹಾಗೂ ಸಂಕಷ್ಟ ಮಹಿಳೆಯರಿಗೆ ಗರಿಷ್ಠ 90,000ರೂ. ಅಥವಾ ಶೇ.30 ರಷ್ಟುಗಳವರೆಗೆ ಸಹಾಯಧನ ನೀಡಲಾಗುತ್ತದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮಹಿಳೆಯ–ರಿಗೆ ಗರಿಷ್ಟ 15,000ರೂ. ಅಥವಾ ಶೇ.50 ರಷ್ಟುಗಳವರೆಗೆ ಸಹಾಯಧನವನ್ನು ನೀಡಲಾಗುವುದು.

ಧನಶ್ರೀ, ಚೇತನ ಮತ್ತು ಲಿಂಗತ್ವ ಅಲ್ಪಸಂಖ್ಯಾತರ ಪುನರ್ವಸತಿ ಯೋಜನೆಗಳಲ್ಲಿ 18–60 ವಯೋಮಿತಿಗೊಳಗಿರುವ ಸಂಸ್ಥೆಯಲ್ಲಿ ನೋಂದಣಿಯಾಗಿರುವ ಮಹಿಳೆಯರು ಮತ್ತು ಲಿಂಗತ್ವ ಅಲ್ಪಸಂಖ್ಯಾತರು ಯಾವುದಾದರೂ ಲಾಭದಾಯಕ ಚಟುವಟಿಕೆಯಲ್ಲಿ ಸ್ವಂತ ಉದ್ಯೋಗವನ್ನು ಕೈಗೊಳ್ಳಲು ಆಯ್ಕೆ ಸಮಿತಿಯಲ್ಲಿ ಆಯ್ಕೆಯಾದ ಫಲಾನುಭವಿಗಳಿಗೆ ನಿಗಮದಿಂದ ನೇರವಾಗಿ 30,000ರೂ. ಸಹಾಯಧನವನ್ನು ಡಿ.ಬಿ.ಟಿ ಮೂಲಕ ಅವರ ಖಾತೆಗೆ ಜಮೆ ಮಾಡಲಾಗುತ್ತದೆ. ಆಸಕ್ತರು ಜನವರಿ 15ರೊಳಗಾಗಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ.

ದಾಖಲೆಗಳು: 2025–26ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಜಾತಿ ಹಾಗೂ ಆದಾಯ ಪ್ರಮಾಣ ಪತ್ರವನ್ನು ಸಲ್ಲಿಸುವುದು (ರೂ.20,000–00 ಗಳಿಗಿಂತ ಮೀರದ ವಾರ್ಷಿಕ ಆದಾಯ ಇರತಕ್ಕದ್ದು), ಸಾಮಾನ್ಯ ಮಹಿಳೆಯ–ರಿಗೆ (ರೂ.150000–00 ಗಳಿಗಿಂತ ಮೀರದ ವಾರ್ಷಿಕ ಆದಾಯ ಇರತಕ್ಕದ್ದು). ಬಿ.ಪಿ.ಎಲ್ ಕಾರ್ಡ್, ವಾಸಸ್ಥಳ ದೃಡೀಕರಣ ಪತ್ರ, ಚುನಾವಣಾ ಗುರುತಿನ ಚೀಟಿ, ಆದ–ಾರ್ ಕಾರ್ಡ್, ಶಾಲಾ ವರ್ಗಾವಣೆ ಪ್ರಮಾಣ ಪತ್ರ ಎಸ್.ಎಸ್.ಎಲ್.ಸಿ ಅಂಕಪಟ್ಟಿ ಲಗತ್ತಿಸುವುದು. ವಿಧವೆ, ಅಂಗವಿಕಲರು, ಸಂಕಷ್ಟಗೊಳಗಾದ ಮಹಿಳೆಯರು ಪ್ರಮಾಣ ಪತ್ರ ಲಗತ್ತಿಸುವುದು. ಯೋಜನಾ ವರದಿ ಹಾಗೂ ಚಾಲ್ತಿಯಲ್ಲಿರುವ ಬ್ಯಾಂಕ್ ಪಾಸ್ ಪುಸ್ತಕದ ಮುಖಪುಟ ಮತ್ತು ಎನ್‌ಪಿಸಿಐ ಮ್ಯಾಪಿಂಗ್ ಪ್ರತಿ. ಚೇತನ, ಧನಶ್ರೀ, ಲಿಂಗತ್ವ ಅಲ್ಪಸಂಖ್ಯಾತರ ಯೋಜನೆಯಡಿ ಸಂಬಂಧಿಸಿದ ಸಿ.ಬಿ.ಓ ಕಡೆಯಿಂದ ಪತ್ರ ಎ.ಆರ್.ಟಿ ಪತ್ರ ಸ್ವಯಂ ಘೋಷಣೆ ಸಲ್ಲಿಸುವುದು. ವಿವೇಚನ ಕೋಟಾದಡಿ ಸೌಲಭ್ಯ ಪಡೆಯಲು ಇಚ್ಚಿಸುವ ಅರ್ಜಿದಾರರು ಮಾನ್ಯ ಸಚಿವರು/ ಮಾನ್ಯ ಶಾಸಕರು/ ಮಹಿಳಾ ಅಭಿವೃದ್ಧಿ ನಿಗಮದ ಅಧ್ಯಕ್ಷರು ಇವರ ಶಿಫಾರಸ್ಸು ಪತ್ರದೊಂದಿಗೆ ಅರ್ಜಿಸಲ್ಲಿಸಬಹುದಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಹಿರಿತನದ ಅಧಾರದ ಮೇಲೆ ಹುದ್ದೆಗೆ ನೇಮಕ ಮಾಡಿ: ಕೆ.ಎಸ್.ನಾಡಗೌಡ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು: ಡಿಸೆಂಬರ್.18: ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಗ್ರಾಮದ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಕೆಲವು ತಿಂಗಳುಗಳಿಂದ ಕಂಪ್ಯೂಟರ್ ಅಪರೇಟರ್ ಎಂದು ತೆಗೆದುಕೊಂಡಿದ್ದವರಿಗೆ ಮುಖ್ಯ ಕಾರ್ಯನಿರ್ವಾಹಕ ಹುದ್ದೆಗೆ ನೇಮಕ ಮಾಡಿದ ಆದೇಶವನ್ನು ಕೂಡಲೇ ರದ್ದು ಮಾಡಿ, ಹದಿಮೂರು ವರ್ಷಗಳಿಂದ ಕೆಲಸ ಮಾಡುವವರಿಗೆ ಹಿರಿತನದ ಅಧಾರದ ಮೇಲೆ ಮುಖ್ಯ ಕಾರ್ಯನಿರ್ವಾಹಕ ಹುದ್ದೆಗೆ ನೇಮಕ ಮಾಡುವಂತೆ ರಾಯಚೂರಿನ ಸಹಕಾರ ಸಂಘದ ಉಪ ನಿಬಂಧಕರಿಗೆ ಜಾಲಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘದ ಮಾಜಿ ಅಧ್ಯಕ್ಷರು ಹಾಗೂ ಮಾಜಿ ನಿರ್ದೇಶಕರು ಮನವಿ ಸಲ್ಲಿಸಿ ಒತ್ತಾಯಿಸಿದರು.**

ಈ ವೇಳೆ ಜಾಲಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘದ ಮಾಜಿ ಅಧ್ಯಕ್ಷರಾದ ಕೆ. ಎಸ್.ನಾಡಗೌಡ ಅವರು ಮಾತನಾಡಿ, ಜಾಲಹಳ್ಳಿ ಗ್ರಾಮದ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಶರಣಬಸವ ತಂದೆ ಶಿವಣ್ಣ ಹಂಪರ ಗುಂದಿ ಇವರು ಗುಮಾಸ್ತನಾಗಿ ನೇಮಕಗೊಂಡು ಸುಮಾರು 13 ವರ್ಷಗಳಿಂದ ಕೇವಲ 3 ಸಾವಿರ ರೂ. ಹಣ



ಸಂಭಾವನೆಗೆ ದುಡಿಯುತ್ತಾ ಬಂದಿದ್ದಾನೆ. ಪ್ರಭಾರಿ ಕಾರ್ಯದರ್ಶಿಯಾಗಿದ್ದ ರವಿಕುಮಾರ ಕೋರಿ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಆಡಳಿತಾಧಿಕಾರಿಗಳು ಸಹಕಾರ ಇಲಾಖೆಯ ಕಾನೂನಿನಂತೆ ಹಿರಿತನದ ಆದರದ ಮೇಲೆ ಶರಣಬಸವ ತಂದೆ ಶಿವಣ್ಣ ಇವರಿಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯನ್ನಾಗಿ ಆದ–ೇಶ ನೀಡಿದ್ದರು. ಆದರೆ ಉದ್ದೇಶ ಪೂರ್ವಕವಾಗಿ ಸೂಪರ್ವೈಸರ್ ಮಹೀಬೂಬ್ ಅವರನ್ನು ತೆಗೆದುಕೊಳ್ಳುವ ಸಲುವಾಗಿ ರಾಯಚೂ–ರಿನ ಆರ್.ಡಿ.ಸಿ.ಸಿ ಬ್ಯಾಂಕ್ ಅಧಿಕಾರಿಗಳಿಂದ ಪತ್ರ ಬರೆದು ಶರಣಬಸವ ತಂದೆ ಶಿವಣ್ಣ ಅವರ ಆದೇಶವನ್ನು ರದ್ದು ಮಾಡಲಾಗಿದೆ ಎಂದರು.

ಕೇವಲ ಒಂದು ವರ್ಷದ ಹಿಂದೆ ಕಂಪ್ಯೂಟರ್ ಆಪರೇಟರ್ ಎಂದು ತೆಗೆದು ಕೊಂಡವರಿಗೆ ಕಾನೂನನ್ನು ಗಾಳಿಗೆತೂರಿ ಮುಖ್ಯ ಕಾರ್ಯನಿರ್ವಾಹಕ ಹುದ್ದೆಗೆ ನೇಮಕ ಆದೇಶ ನೀಡಿದ್ದಾರೆ. ಇದರಿಂದ 13 ವರ್ಷಗಳಿಂದ ಕೆಲಸ ಮಾಡುತ್ತಿದ್ದವರಿಗೆ ಅನ್ಯಾಯ ಮಾಡಲಾಗಿದೆ. ಶರಣಬಸವ ಪದವಿದರರಾಗಿದ್ದು, ಅವರು ಸಹಕಾರ ಇಲಾಖೆ ನೀಡುವ ತರಬೇತಿಯನ್ನು ಸಹ ಪಡೆದು ಉತ್ತೀರ್ಣನಾಗಿದ್ದಾನೆ. ಅಲ್ಲದೆ ಶರಣಬಸವ ಅವರು ಕಡು ಬಡವನ್ನಾಗಿದ್ದೇನೆ. ಶರಣಬಸವ ತಂದೆ ಶಿವಣ್ಣ ಇವರಿಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯನ್ನಾಗಿ ಮುಂದುವಸಬೇಕು.

ಒಂದು ವೇಳೆ ಮುಂದು ವರ್ಷದಿದ್ದರೆ ಜಾಲಹಳ್ಳಿ ಕೃಷಿ ದಿನ ಸಹಕಾರ ಸಂಘದ ಮುಂದೆ ಬೃಹತ್ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗುವುದು. ಅಲ್ಲದೆ ಮುಂದೆ ಆಗುವ ಅನಾಹುತಗಳಿಗೆ ಅಧಿಕಾ–ರಿಗಳೇ ಆಗುತ್ತಾರೆ ಎಂದು ಅವರು ಹೇಳಿದರು. 25–09–2025 ರಂದು ಶರಣಬಸವ ಇವರನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯನ್ನಾಗಿ ನೇಮಿಸುವಂತೆ ಸರ್ವಾನುಮತಿಯಿಂದ ತೀರ್ಮಾನ ಕೈಗೊಂಡರು ವೃತ್ತ ವೀಕ್ಷಕರು ಸಭೆಯ ನಡುವಳಿಕೆ ಪುಸ್ತಕದಲ್ಲಿ ಬರೆಯದೆ ಸಭೆಯಿಂದ ಪಲಾಯನ ಮಾಡಿದರು. ಹೀಗೆ ಉದ್ದೇಶ ಪೂರ್ವಕವಾಗಿ ಯಾವುದೇ ಒತ್ತಡಕ್ಕೆ ಮಣಿದು ಕಾನೂನು ಬಾಹಿರವಾಗಿ ಆದೇಶ ಮಾಡಿದ್ದಾರೆ.

ಅವರ ಅವ್ಯವಹಾರಗಳು ರುಜುವಾಗಿದ್ದು, ಅಡಿಟ್ ವರದಿಯಲ್ಲಿ ಹಣ ಕಟ್ಟುವಂತೆ ಆದ–ೇಶವಾಗಿದೆ. ಅವರನ್ನು ರಕ್ಷಿಸಲು ಯಾವುದೇ ಅನುಭವ ಇಲ್ಲದವರಿಗೆ ಆದೇಶ ನೀಡಿದ್ದಾರೆ. ತಕ್ಷಣ ಈ ಆದ–ೇಶ ಹಿಂಪಡೆದು ಸೇವಾ ಹಿರಿತನದ ಅದರದ ಮೇಲೆ ಶರಣಬಸವನಿಗೆ ಆದೇಶ ನೀಡಬೇಕು. ಇಲ್ಲದಿದ್ದರೆ ತಮ್ಮ ಕಾನೂನುಬಾಹಿರ ನಿರ್ಧಾರದ ವಿರುದ್ಧ ಹೋರಾಟ ಮಾಡಲಾಗುವುದು. ಅಲ್ಲದೆ ಕಾನೂನು ಹೋರಾಟಕ್ಕಾಗಿ ನ್ಯಾಯಲಯದಲ್ಲಿ ಹೋರಾಟ ಮಾಡಲಾಗುವುದು ತಾವು ಅದಕ್ಕೆ ಅವಕಾಶ ನೀಡದೆ ಸೂಕ್ತ ತೀರ್ಮಾನ ಕೈಗೊಳ್ಳಬೇಕು ಎಂದರು.

ಇದೇ ಸಂದರ್ಭದಲ್ಲಿ ಜಾಲಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘದ ಮಾಜಿ ನಿರ್ದೇಶಕರಾದ ಬಸನಗೌಡ ಸಿದ್ನಕಲ್, ಚನ್ನಮ್ಮ ಇರಗಂಡ, ಯಕಂಪ್ಪ ಯರಕಮಟ್ಟಿ, ಡಿಎಸ್.ಎಸ್. ಸಂಘಟನೆಯ ಮುಖಂಡರಾದ ಎನ್.ಲಿಂಗಪ್ಪ, ಅಮರೇಶ ಚಲವಾಧಿ, ರಾಚಪ್ಪ ಸೌದ್ರಿ, ಸಾಬಣ್ಣ ರಾಂಪಳಿ, ಶಿವಣ್ಣ ಹಂಪರಗುಂದಿ, ಬಸವರಾಜ ಅಯ್ಯಾಳ, ಬಸವರಾಜ ದೊಡ್ಡಳಿ, ರಂಗಪ್ಪ ಜಂಪಿ ಸೇರಿದಂತೆ ಇತರರು ಇದ್ದರು.